**ಡಾ.ಎಸ್.ಬಿ.ಚನ್ನಗೌಡ್ರ.** ಎಂ.ಎ ಪಿಹೆಚ್.ಡಿ
ಮುಖ್ಯಸ್ಥರು ಕನ್ನಡ ವಿಭಾಗ
ಪ್ರಾಂಶುಪಾಲರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ
ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು. ಜಂಗಮವಾಣಿ– ೯೪೪೮೭೮೯೩೦.

# ಸರ್ವಜ್ಞ ಹಾಗೂ ಇತರ ಅನುಭಾವಿಗಳ ತೌಲನಿಕ ವಿವೇಚನೆ:

## ಸರ್ವಜ್ಞ–ವೇಮನ:

**ನಾನೃಷಿಃ ಕುರತೇ ಕಾವ್ಯಂ:** ಋಷಿ ಅಲ್ಲದವನು ಕಾವ್ಯ ರಚಿಸಲಾರನು ಎಂಬ ಮೀಮಾಂಸಕರ ಹೇಳಿಕೆ. ರಾಮಾಯಣ–ಮಹಾಭಾರತ, ಭಾಗವತಾದಿ ಮಹಾಕಾವ್ಯಗಳ ಕರ್ತೃಗಳು ತಪಸ್ಸಂಪನ್ನರಾದ ಮಹರ್ಷಿಗಳೇ ತಾನೆ! ಆದ್ದರಿಂದ ಕಾವ್ಯ ಬರೆಯಬೇಕಾದರೆ ವ್ಯಾಸ ವಾಲ್ಮೀಕಿಯರ ಹಾಗೆ ಸರ್ವಸಂಗ ಪರಿತ್ಯಾಗಿಗಳಾಗಿ, ಯೋಗಿ ಪುಂಗವರಾಗಿ ಇರಬೇಕು ಎಂಬ ಭಾವನೆ ಉಂಟಾಗುತ್ತದೆ. ಅದು ಸರಿಯಲ್ಲ, ಕಾಳಿದಾಸನು ಜೀವನವನ್ನು ತೃಪ್ತಿಯಾಗಿ ಅನುಭವಿಸಿದ ರಸಿಕ ಮತ್ತು ಭೋಗಿ. ಹಾಗಿದ್ದರೂ ಆತನು ಇಡೀ ಪ್ರಪಂಚದಲ್ಲಿಯೇ ಉತ್ತಮೋತ್ತಮವಾದ ಕಾವ್ಯ ಸೃಷ್ಟಿಸಲಿಲ್ಲವೇ? ಆದರೆ ಇಲ್ಲಿ ಋಷಿ ಎಂದರೆ ಸರ್ವಸಂಗ ಪರಿತ್ಯಾಗಿ ಎಂದು ಅರ್ಥವಲ್ಲ. ಅತೀಂದ್ರಿಯ ದೃಷ್ಟಿಯಿಂದ ಸತ್ಯ ಸೌಂದರ್ಯದ್ರಷ್ಟಾರನಾಗಿ ಪ್ರಸನ್ನವಾದ ಋಷಿಯ ಮನಸ್ಸಿನಂತಹ ಮನಸ್ಸುಳ್ಳವನು ಎಂದು ಅರ್ಥೈಸಿಕೊಳ್ಳಬೇಕು.

ಪ್ರಸ್ತುತ ಸರ್ವಜ್ಞ–ವೇಮನರ ಸಾಹಿತ್ಯ ರಚನಾಸೃಷ್ಟಿಯ ವಿಷಯದ ಅಧ್ಯಯನ, ಅತೀಂದ್ರಿಯ ದೃಷ್ಟಿಯಿಂದ ಸತ್ಯ ಸೌಂದರ್ಯದ್ರಷ್ಟಾರನಾಗಿ ಪ್ರಸನ್ನವಾದ ಋಷಿಯ ಮನಸ್ಸಿನಂತಹ ಮನಸ್ಸುಳ್ಳವನು ಎಂಬುದು ಇವರೀರ್ವರಿಗೆ ಅನ್ವಯಿಸುವುದು ಸೂರ್ಯ–ಚಂದ್ರರಷ್ಟೇ ಸತ್ಯವಾಗಿದೆ. ಸರ್ವಜ್ಞನ ಕುರಿತು 'ಸರ್ವಜ್ಞನ ಜೀವನ ಚಿತ್ರಣ' ಎಂಬ ಅಧ್ಯಾಯದಲ್ಲಿ ಸಮಗ್ರವಾಗಿ ಪ್ರಸ್ತಾಪಿಸಲಾಗಿದೆ. ಇಲ್ಲಿ ವೇಮನರ ಜೀವನ ಕುರಿತು ಪ್ರಸ್ತಾಪಿಸುವುದು ಅಗತ್ಯವೆನಿಸುತ್ತದೆ. 'ಮಹಾಯೋಗಿ ವೇಮನ ಯಾರು? ತೆಲುಗು ಭಾಷೆಯಲ್ಲಿ ಅಣ್ಣ ಶಬ್ದಕ್ಕೆ ಅನ್ನ ಎನ್ನುತ್ತಾರೆ. ವೇಮ+ಅನ್ನ=ವೇಮನ್ನ, ಇದರ ರೂಢ ಉಚ್ಚಾರವೇ ವೇಮನ. ಅವರ ಜೀವನವು ರಹಸ್ಯಮಯವಿತ್ತು. ರಹಸ್ಯಮಯವಾಗಿಯೇ ಉಳಿಯುವದು. ತಿಳಿವಿನಾಚೆಯ ತತ್ವ ತಲುಪಿ ಅಲ್ಲಿ ನೆಲೆಸಿದವರೇ ವೇಮನ. ತನ್ನ ತಿಳಿಯದೆ, ಆದಿ ತತ್ವದಲ್ಲಿ ಹೇಗೆ ಇಣುಕಿ ನೋಡಬಹುದು? ವೇಮನರನ್ನು ತಿಳಿಯುವುದೆಂದರೆ ತತ್ವವನ್ನು ತಿಳಿಯುವುದು. ತತ್ವಗಳನ್ನು ಅನುಸರಿಸಿ "ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ ರೂಪವೇನು ಇರದ ರೀತಿಯಲ್ಲಿ ಪರಮಯೋಗಿ ಪರಮಾತ್ಮನನ್ನು ನೋಡುವಂತೆ" ನೋಡಬೇಕು. ಆಗ "ಭಕ್ತಿಹೊಂದಿ ಪರಮೇಶ್ವರನಾದ" ಸತ್ಯ ಗೋಚರಿಸುತ್ತದೆ. ಅಂಥ "ವೇಮನನೆಂಬ ಯೋಗಿ ವ್ಯಾಪಿಸಿದ ಲೋಕದಿ, ಪೂಜೆ ಸಲ್ಲಿಸುವವರಿಗೆ ಪುಣ್ಯ ಪುರುಷರಿವ! ಪೂಜೆ ಸಲ್ಲಿಸಿದಷ್ಟು ಭೋಗ, ಭಾಗ್ಯ ನಿಮಗೆ' 'ಸರ್ವಜ್ಞನು ಕನ್ನಡಿಗರ ತಿರುವುಳ್ಳವರ್, ಕನ್ನಡಿಗರ ವೇಮನ, ಅವರಂತೆ ಇವನಿಗೂ ನೀತಿಶಾಸ್ತ್ರದಲ್ಲಿ ಉಚ್ಚಸ್ಥಾನವು ಸಲ್ಲುತ್ತದೆ– ಎಂದು ಪ್ರೊ.ಎ.ಆರ್.ಕೃಷ್ಣಶಾಸ್ತ್ರಿಯವರು ೧೯೪೮ ರಷ್ಟು ಹಿಂದೆಯೇ ಒಂದು ಮಾತು ಹೇಳಿದ್ದರು.'

ಮಹಾಯೋಗಿ ವೇಮನನ ಜನ್ಮಸ್ಥಳವನ್ನು ಸಂಶಯ ರಹಿತವಾಗಿ ಗುರುತಿಸಲು ಯಾರಿಂದಲೂ ಸಾಧ್ಯವಾಗಿಲ್ಲ. ಈ ವರೆಗೆ ವೇಮನನ ಬಗ್ಗೆ ಬರೆದ ಬಹುತೇಕ ಗ್ರಂಥಕರ್ತರು ವೇಮನನ ಹುಟ್ಟೂರನ್ನು ಗುರುತಿಸಲು ಅವನ ಒಂದು ಪದ್ಯವನ್ನು ಆಧಾರವಾಗಿ ತೆಗೆದುಕೊಂಡಿದ್ದಾರೆ. ಅದು ಹೀಗಿದೆ.

'ಮೂಲ : ಊರು ಕೊಂಡವೀಡು ಉನಿಕಿ ಪಶ್ಚಿಮವೀಧಿ
ಮೂಗ ಚಿಂತಪಲ್ಲೆ ಮೊದಟಿ ಇಲ್ಲು
ಅರಶಿ ಚೂಡ ಬಯಲು ಆಡನೇ ಶಿವುಡಯಾ
ವಿಶ್ವದಾಭಿ ರಾಮ ವಿನುರ ವೇಮ.

ಅನವಾದ : ಊರು ಕೊಂಡವೀಡು ಉನಿಕಿ ಪಶ್ಚಿಮಬೀದಿ
ಮೂಕಚಿಂತೆ ಹಳ್ಳಿ ಮೊದಲ ಮನೆಯ
ಅರಶಿ ನೋಡೆ ಬಯಲು ಅಲ್ಲಿಯೇ ಶಿವನಯಾ
ವಿಶ್ವದಾಭಿರಾಮ ಕೇಳೈವೇಮಾ.

ಈ ಪದ್ಯದ ನಡಿಗೆಯನ್ನು ನೋಡಿದರೆ ಇದು ವೇಮನನ ಪದ್ಯವೆ. ಅದರಲ್ಲಿ ಸಂಶಯವಿಲ್ಲ. ಆದರೆ ಅವನ ಈ ಪದ್ಯವನ್ನು ಹೇಳುವಾಗ ಅವನ ಹುಟ್ಟೂರಿನ ಬಗ್ಗೆ ಹೇಳುವ ಉದ್ದೇಶವಿಲ್ಲ. ಅವನು ಹೇಳ ಬಯಸುವುದೇ ಬೇರೆ. ಈ ಪದ್ಯದ ಒಳಾರ್ಥ ಯೋಗ ಸಾಧನೆಯಿಂದ ಪರಮಾತ್ಮ ಸಾಕ್ಷಾತ್ಕಾರ ಹೊಂದುವುದೇ ಆಗಿದೆ. ಅದರ ಅರ್ಥ ಹೀಗಿದೆ.'

'ಊರುಕೊಂಡವೀಡು = ಊರು ಬೆಟ್ಟಸೀಮೆ.
ಮೂಗಚಿಂತಪಲ್ಲೆ = ಚಿಂತೆಗಳು ಮೂಕವಾಗಿರುವ ಊರು.
ಮೊದಟಿಇಲ್ಲು = ಮೊದಲಮನೆ ಎದುರು ಮನೆ.
ಅರಶಿಚೂಡ = ಅರಸಿ ನೋಡಿದರೆ.
ಬಯಲು = ಬಯಲಾಗಿದೆ.
ಆದಿಮುಕ್ತಿ = ಆ ಬಯಲನ್ನು ವೀಕ್ಷಿಸುವುದೇ ಮುಕ್ತಿ.
ಆಡನೇ ಶಿವುಡಯಾ = ಅಲ್ಲಿಯೇ ಶಿವನಿದ್ದಾನೆ.

ಯೋಗಿ ವಾಸ ಮಾಡುವುದು ಪರ್ವತ ಸೀಮೆ, ಅಲ್ಲಿ ಹಂಸ ನಡೆಯುತ್ತದೆ. ಅಲ್ಲಿ ಮುಕ್ತಿಕಾಂತೆ ವಾಸವಾಗಿದ್ದಾಳೆ. ಅಲ್ಲಿ ಬೆಳಗುವುದು ಸದಾ ಪೂರ್ಣಚಂದ್ರ, ಅದು ಬಯಲು. ಒಟ್ಟಾರೆ, ಯೋಗಿಯಾದವನು ಕುಂಡಲಿಯೋಗ ಸಾಧನೆಯಿಂದ ಸುಷುಮ್ನಾಡಿಯಲ್ಲಿ ಹಂಸ ಮಾರ್ಗವಾಗಿ ಹೊರಟು ಆರು ಚಕ್ರಗಳನ್ನು ದಾಟಿ (ಷಟ್ ಚಕ್ರಗಳನ್ನು) ಆಗ್ನಾಚಕ್ರಕ್ಕೆ ಬಂದು ನಿಂತು ಪಶ್ಚಿಮಕ್ಕೆ ವೀಕ್ಷಿಸಿದಾಗ ಮಹಾ ಬಯಲು ಕಾಣುತ್ತದೆ. ಅದೇ ಬಯಲು ಅದೇ ಬ್ರಹ್ಮಾಂಡ ಅದೇ ಶೂನ್ಯ ಅದುವೇ ಶಿವಸಾನಿಧ್ಯ ಈ ಸಾರಾಂಶವನ್ನೇ ವೇಮನನ ಕೊಂಡವೀಡು ಪದ್ಯ ತಿಳಿಸುತ್ತದೆ.'

'ವೇಮನನ ಕಾಲವನ್ನು ಗುರುತಿಸುವುದು ಕಷ್ಟಸಾಧ್ಯ. ಅನೇಕ ಪಂಡಿತರು ಅವರವರ ಗ್ರಹ್ಯಕ್ಕೆ ಅನುಗುಣವಾಗಿ ಅವರಿಗೆ ಸಿಕ್ಕ ಯಾವುದೋ ಒಂದು ಚಾರಿತ್ರಿಕ ಘಟನೆಯನ್ನೋ, ಸನ್ನಿವೇಶವನ್ನೋ, ವೇಮನನ ಒಂದು ಪದ್ಯದ ಸಾರಾಂಶವನ್ನೋ ಆಧಾರವಾಗಿರಿಸಿಕೊಂಡು ಅವನ ಕಾಲವನ್ನು ಗುರುತಿಸುತ್ತಾರೆ.' ಬಹುತೇಕ ಮಂದಿ ವೇಮನನ್ನು ೧೭ನೆಯ ಶತಮಾನದವನು ಎಂದು ಹೇಳಿದರೆ, ಕೆಲವರು ೧೫ ಮತ್ತು ೧೬ ನೆಯ ಶತಮಾನದವನು ಎಂದು ಹೇಳುತ್ತಾರೆ. ಆದರೆ ಈ ವರೆಗೆ ಅವನ ಕಾಲವನ್ನು ನಿರ್ದಿಷ್ಟವಾಗಿ ಕಂಡುಹಿಡಿಯಲಾಗಿಲ್ಲ. ವೇಮನನ ಕಾಲದಲ್ಲಿ ಹೆಚ್ಚು ಕೊಲೆ, ಸುಲಿಗೆ, ದರೋಡೆಗಳು ನಡೆದಂತೆ ಕಾಣುತ್ತದೆ. ಬಹುಶಃ ಇದು ಮುಸಲ್ಮಾನರು ದಂಡೆತ್ತಿ ಬಂದು ನೆಡೆಸಿದ ಕೃತ್ಯಗಳಾಗಿರಬಹುದು. ಇದನ್ನು ನಿರೂಪಿಸುವ ವೇಮನನ ಪದ್ಯವೊಂದು ಈ ರೀತಿ ಇದೆ.

ಮೂಲ : ಪೆಕ್ಕು ಜನಲು ಜಂಪಿ ಪೇದಲ ವಧಿಯಂಚಿ
ಥೊಕ್ಕ ಕೊರಕುನೊಳ್ಳ ದೊಂಗಲಿಂಚಿ
ಎಕ್ಕಡಿಕರಿಗಿನ ನೆರಿಗಿಯಮುಡುಜಂಪು
ವಿಶ್ವದಾಭಿರಾಮ ವಿನುರ ವೇಮ.

ಅನವಾದ : ಹೆಚ್ಚು ಜನರ ಕೊಂದು ಬಡವರನು ವಧಿಸಿ
ಉದರ ಸಲುವು ಊರು ಸೂರೆ ಗೈದು
ಎಲ್ಲೆ ಇರಲಿ ಅವರ ಹುಡುಕಿಯಮನ ಕೊಲುವ
ವಿಶ್ವದಾಭಿರಾಮ ಕೇಳೈ ವೇಮಾ.

ಈ ಮೇಲಿನ ಪದ್ಯಗಳಿಂದ ವೇಮನನ ಕಾಲವನ್ನು ನಿರ್ಧರಿಸುವಲ್ಲಿ ನೆರವಾಗಬಹುದು. ಈತನ ಕೌಟುಂಬಿಕ ಹಿನ್ನೆಲೆಯನ್ನು ನೋಡಬಹುದಾದಲ್ಲಿ, 'ಕೊಂಡವೀಡು ರೆಡ್ಡಿ ರಾಜ್ಯವಂಶದ ಕುಡಿಯೇ ನಮ್ಮ ಚರಿತ್ರೆಯ ನಾಯಕ ವೇಮನ. ೧೩೮೦-೧೪೦೦ ರ ವರೆಗೆ ರಾಜ್ಯವಾಳಿ ತಮ್ಮ ವಿಲಾಸ ವಿಭ್ರಮೆಗಳ ಸೆಳವಿಗೆ ಸಿಕ್ಕು ಸಿಂಹಾಸನಕ್ಕೆ ಎರವಾದ ಕೋಮಗಿರಿ ರೆಡ್ಡಿಯ ಪುತ್ರನೀತ. ಕೋಮಗಿರಿಯ ಹೆಂಡತಿಯ ಹೆಸರು ಮಲ್ಲಮ್ಮ, ಅವನ ಸೋದರಿ ಮಲ್ಲಾಂಬೆಯು ರಾಜಮಹೇಂದ್ರದ ದೊರೆ ಕಾಟಯ ವೇಮಾರೆಡ್ಡಿಯ ಮಡದಿ. ಈ ಮಲ್ಲಾಂಬೆಯ ಮಗಳಾದ ಅನತಲ್ಲಿ ಊರ್ಫ ನರಸಾಂಬೆಯನ್ನು ವೀರಭದ್ರಾರೆಡ್ಡಿಯು ಲಗ್ನವಾಗಿದ್ದನು. ಹೀಗಾಗಿ ವೀರಭದ್ರಾರೆಡ್ಡಿ ಮಲ್ಲಾಂಬೆಯ ಅಳಿಯನಾಗಿದ್ದನು. ಅದೇ ರೀತಿ ವೇಮನ ಅವಳ ಸೋದರಳಿಯನಾಗಿದ್ದ. ಈ ಸಂಬಂಧದ ಮೇರೆಗೆ ನರಸಾಂಬೆ ಊರ್ಫ ಆತನಲ್ಲಿ ವೇಮನರಿಗೆ ಅತ್ತಿಗೆಯಾಗಿದ್ದಳು.'

ಸರ್ವಜ್ಞ ಹಾಗೂ ವೇಮನರ ತೌಲನಿಕ ಅಧ್ಯಯನದಲ್ಲಿ ಪ್ರಧಾನವಾಗಿ ಇವರೀರ್ವರ ಕಾಲದ ದೃಷ್ಟಿಯಿಂದ ಸಮಕಾಲೀನರಾಗಿದ್ದರು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಎಸ್.ಆರ್.ಪಾಟೀಲರ 'ಮಹಾಯೋಗಿ ವೇಮನ' ಹಾಗೂ ಚನ್ನಪ್ಪ ಉತ್ತಂಗಿ ವಿರಚಿತ 'ಸರ್ವಜ್ಞನ ವಚನಗಳು' ಈ ಎರಡು ಕೃತಿಗಳಲ್ಲಿ ಅವರು ಅಭಿಪ್ರಾಯ ಪಟ್ಟಿರುತ್ತಾರೆ. ಕ್ರಿ.ಶ. ೧೫-೧೬ ನೆಯ ಶತಮಾನದಲ್ಲಿ ಬದುಕಿದ್ದರೆಂದು ಸ್ಪಷ್ಟವಾಗುತ್ತದೆ. ಉಳಿದಂತೆ ಸರ್ವಜ್ಞ ಹಾಗೂ ವೇಮನರ ಹುಟ್ಟು, ದೇಶ, ತಂದೆ ತಾಯಿ ಹಾಗೂ ಮತ ಇವುಗಳ ಕುರಿತು ನಿಷ್ಕರ್ಷವಾಗಿ ತಿಳಿಯದೇ ಇದ್ದರೂ ಒಂದು ಅಭಿಪ್ರಾಯಕ್ಕೆ

ಬಂದಂತಿದೆ. ಈ ಕುರಿತು ಸರ್ವಜ್ಞ ಹಾಗೂ ವೇಮನರ ತೌಲನಿಕ ಅಧ್ಯಯನಕ್ಕೆ ಪೂರ್ವದಲ್ಲಿ ಸ್ಪಷ್ಟಪಡಿಸುವುದೇನೆಂದರೆ, ಪ್ರಸ್ತುತ ಅಧ್ಯಯನದಲ್ಲಿ ವೇಮನರ ಕುರಿತು ಇಲ್ಲಿ ಉಲ್ಲೇಖಿಸಿರುವ ಪದ್ಯಗಳ ತೆಲಗು ಮೂಲವನ್ನು ನೀಡಿರುವುದಿಲ್ಲ. 'ಮಹಾಯೋಗಿ ವೇಮನ' ಈ ಕೃತಿಯಿಂದ ಕನ್ನಡ ಅನುವಾದಿತ ಪದ್ಯಗಳನ್ನು ಮಾತ್ರ ಎತ್ತಿಕೊಂಡು ಸರ್ವಜ್ಞ ಹಾಗೂ ವೇಮನರ ತೌಲನಿಕ ಅಧ್ಯಯನ ಮಾಡಲಾಗಿದೆ. ತೌಲನಿಕ ಅಧ್ಯಯನದ ಕುರಿತು ಸರ್ವಜ್ಞನ ವಚನಗಳನ್ನು ಚನ್ನಪ್ಪ ಉತ್ತಂಗಿಯವರ 'ಸರ್ವಜ್ಞನ ವಚನಗಳು' ಹಾಗೂ ವೇಮನರ ಕುರಿತು ಎಸ್.ಆರ್.ಪಾಟೀಲರ 'ಮಹಾಯೋಗಿ ವೇಮನ' ಕೃತಿಗಳಿಂದ ಪದ್ಯಗಳನ್ನು ಆಯ್ದುಕೊಳ್ಳಲಾಗಿದೆ.

ಸರ್ವಜ್ಞ–ವೇಮನರ ದೇಶ, ಕಾಲಗಳು ಅಸ್ಪಷ್ಟವಾಗಿವೆ. ಈರ್ವರನ್ನು ಕುರಿತು ಕಟ್ಟು ಕಥೆಗಳು ಹೆಚ್ಚು ಬಳಕೆಯಲ್ಲಿವೆ. ಸರ್ವಜ್ಞ–ವೇಮನರಿಬ್ಬರು ತಮ್ಮ ಜೀವನಾನುಭವಗಳನ್ನು ಆಡು ಮಾತುಗಳಲ್ಲಿ ಅಬಾಲವೃದ್ಧರಾದಿಯಾಗಿ ಎಲ್ಲರಿಗೂ ಅರ್ಥವಾಗುವಂತೆ ಹೇಳಿದ್ದಾರೆ. ಮನೋಜ್ಞವಾದ ಶೈಲಿ, ಅರ್ಥವಾಗುವ ಸರಳ ಭಾಷೆ ಎಲ್ಲರ ಅನುಭವಕ್ಕೂ ಹತ್ತಿರವಾಗುವ ಉಪಮಾನಗಳು, ಮುಚ್ಚು ಮರೆಯಿಲ್ಲದ ನೇರನುಡಿಗಳಿಂದ ನಕ್ಕು ನಗಿಸುವ ಹಾಸ್ಯ ಒಳಗೊಂಡಿವೆ.

ದೈವ–ಗುರು–ಜ್ಞಾನಿ (ಯೋಗಿ–ಋಷಿ) ಕರ್ಮ ಅಥವಾ ವಿಧಿ, ಸಜ್ಜನರು, ದುರ್ಜನರು, ಮೂರ್ಖರು, ದಾನ, ಧರ್ಮ, ಗೃಹಿಣಿ, ಸಂಸಾರದ ಔನತ್ಯ ಮತ್ತು ವೇಶ್ಯನಿಂದೆ – ಇವುಗಳನ್ನು ಕುರಿತು ಇಬ್ಬರೂ ತಮ್ಮ–ತಮ್ಮ ಪದ್ಯಗಳಲ್ಲಿ ವಿಫುಲವಾಗಿ ವರ್ಣಿಸಿದ್ದಾರೆ.

'ಗುರು ಎಂಬುದು ಸಂಸ್ಕೃತ ಪದ. 'ಗು' ಎಂದರೆ ಅಂಧಕಾರ 'ರು' ಎಂದರೆ ನಿವಾರಕ. ಅಂಧಕಾರ ನಿವಾರಕನೇ ಗುರು. ವ್ಯಾಮೋಹದಲ್ಲಿ ಮನವು ಮುಸುಕು ಹಾಕಿಕೊಂಡು ಕಣ್ಣುಮುಚ್ಚಿ ಹಾಲು ಕುಡಿಯುವ ಬೆಕ್ಕಿನಂತೆ ಪ್ರೇಯ, ಶ್ರೇಯಗಳ ಗಣನೆಯಿಲ್ಲದೆ ವಿವೇಕ ಹೀನವಾಗಿರುತ್ತದೆ. ಅದರಿಂದ ದಾರಿಗಾಣುವುದಿಲ್ಲ. ಹೀಗಾಗಿ ಮಾಯೆಯ ಅಂಧಕಾರದಲ್ಲಿ ಮನ ತಡಕಾಡುತ್ತದೆ. ಭೌತಿಕ, ಅಭೌತಿಕ ಮತ್ತು ಅಧ್ಯಾತ್ಮಿಕ ಎಂಬ ತಾಪತ್ರಯಗಳು ಮನವನ್ನು ಕೊರಗಿಸುತ್ತವೆ. ತ್ರಿಗುಣಗಳ ಬಂಧನವನ್ನು ಕಳಚಿ ಮುಕ್ತವಾಗುವ ಕ್ರಮವನ್ನು ತಿಳಿಸುವ ಮಹಾಪುರುಷನೇ, ಆತ್ಮದತ್ತ, ಬೆಳಕು ಬೀರಿ ತೋರಿಸುವನೇ ಗುರು. ಗುರು ಬೇಕೇ ಬೇಕು, ಗುರುವಿಲ್ಲದೆ ವಿದ್ಯೆ ಗುರುತಾಗಿ ದೊರೆಯದು.' 'ಗುರು' ಹೇಗಿರಬೇಕೆಂದು ಈರ್ವರು ಈ ಕೆಳಗಿನಂತೆ ಅಭಿಪ್ರಾಯಪಟ್ಟಿರುತ್ತಾರೆ.

| **ಸರ್ವಜ್ಞ** | **ವೇಮನ** |
|---|---|
| ಗುರುವಿನ ವಿಸ್ತರದ । ಪರಿಯ ನಾನೇನೆಂಬೆ! । | ಗುರುವಿನ ಶಿಕ್ಷೆಯಿರದೆ ಗುರುತು ದೊರೆಯುದೆಂತು |
| ಮೆರೆವ ಬ್ರಹ್ಮಾಂಡದೊಳಹೊರಗನವಬೆಳಗಿ । | ಅಜನೆ ಇರಲಿ: ಅವನ ಅಪ್ಪನಿರಲಿ |
| ಪರಿಪೂರ್ಣನಿಪ್ಪ ಸರ್ವಜ್ಞ | ಬೀಗದ ಕೈಯಿರದೆ, ಬೀಗ ತೆರೆವುದೆಂತು? |
| ಮೂರು ಕಣ್ಣೀಶ್ವರನ । ತೋರಿ ಕೊಡಬಲ್ಲ ಗುರು । | ಗುರುವೆ ತಾನಾಗುವ ಹರನ ತೋರುವವನು |
| ಬೇರರಿವುದೊಂದು ತೆರನಿಲ್ಲ ಗುರುಕರಣ । | ಬ್ರಹ್ಮ ಲೋಕವನ್ನೆ ಪ್ರತ್ಯಕ್ಷಿಸುವ |
| ತೋರುವುದು ಹರನಪ್ಪ ಸರ್ವಜ್ಞ | ಕಿಂಕರನ ಶೋಧಿಸಿ ಕತ್ತಲೆಯ ಕಳೆಯವ. |

ತಂದೆಗೂ ಗುರುವಿಗೂ । ಒಂದು ಅಂತರವುಂಟು ।
ತಂದೆ ತೋರುವನು ಸದ್ಗುರುವ, ಗುರುರಾಯ ।
ಬಂಧನವ ಕಳೆವ ಸರ್ವಜ್ಞ

ಕೆಡುಕು ಗುಣಗಳೆಲ್ಲ ಕೈ ಹಿಡಿದು ಶಿಕ್ಷಿಸಿ
ಪರಮ ಪದವಿಯನ್ನು ಪ್ರತ್ಯಕ್ಷಿಸುವ
ಅಂಥ ಗುರುವ ಬೆಡಿಅರಿತು ಬಾಳು ಜಾಣ

ಗುರುವಿನ ಮಹಿಮೆಯನ್ನು ಕುರಿತು ಮುಂದೆ ವಿಸ್ತೃತವಾಗಿ ಹೇಳಲಾಗಿದೆ.

'ಜ್ಞಾನ ಶಬ್ದವು ಸಂಸ್ಕೃತದ ಜ್ಞ-ಪದದಿಂದ ಉತ್ಪತ್ತಿಯಾಗಿದೆ. 'ವಿದ್' ಎಂದರೆ ತಿಳಿಯುವುದು. ವಿಷಯಗಳನ್ನು ಯಂತ್ರದಂತೆ ಆತ್ಮಸ್ಥೀಕರಿಸಿಕೊಳ್ಳುವುದು. ಪ್ರತಿಫಲನೆ ಮತ್ತು ಪರಿವರ್ತನೆಗಳ ಮೂಲಕ ಯಾವುದೊಂದು ವಸ್ತುವನ್ನು ಕಂಡಾಗ ಇಲ್ಲವೆ ಭಾವವನ್ನು ಅನುಭವಿಸಿದಾಗ ಇದೇನು? ಇದರ ಉತ್ತರವೆಲ್ಲಿ? ಎಂಬ ಜಿಜ್ಞಾಸೆ ಜ್ಞಾನಿಯದು. 'ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೆ' ಎಂದು ಗೀತೆಯಲ್ಲಿಯೂ ಶ್ರೀಕೃಷ್ಣನೂ ನುಡಿದಿದ್ದಾನೆ.' 'ಎಷ್ಟೋ ವೇಳೆ ಒಬ್ಬರನೊಬ್ಬರು ತರ್ಜುಮೆಗೈದಂತೆ ಭಾಸವಾಗುತ್ತದೆ. ಅವನು 'ಸ್ವರ್ಗ ಮೇಟಿಕಯ್ಯ ಸಂಸಾರಿ ಕಿಂಕನು' ಎಂದರೆ 'ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ'. ಇವನು ಒಂದು ಮನ ಮೋಕ್ಷ ಪದವಕ್ಕು ಮಾನವಗೆ, ದ್ವಂದ್ವ ಮನ ಕೇಡು' ಎಂದರೆ ಅವನು 'ಮನಮೇ ಮೂಲಂಬು ಮುಕ್ತಿ ಮಹಿಮಕು ವೇಮ' ಎನ್ನುತ್ತಾನೆ. ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ, ವಿಧಿ, ಶಿವಲೀಲೆ, ತಿರುಕ, ದಾನಿ ಮೊದಲಾದ ವಿಷಯಗಳನ್ನು ಕುರಿತ ಅವರ ಅಭಿಮತ ಅಭಿನ್ನ. ವಿವರಣೆಯ ಉಪಮೆ ಒಬ್ಬನಲ್ಲಿ ಕಪ್ಪೆ, ಗರಿಕೆ, ಗಾಣದೆತ್ತು ಆದರೆ ಇನ್ನೂ ಒಬ್ಬನಲ್ಲಿ ನೀರುಕೋಳಿ, ನವಿರು, ಪರಿಮಳ ಹೊತ್ತ ಕತ್ತೆ ಆಗುತ್ತವೆ. (ಈ ದೃಷ್ಟಿಯಿಂದ) ಸಾಮಾನ್ಯ ಮಾತುಕತೆಯಲ್ಲಿ ವೇಮನನನ್ನು 'ಆಂಧ್ರ ಸರ್ವಜ್ಞ' ಎಂದೂ ಸರ್ವಜ್ಞನನ್ನು 'ಕನ್ನಡ ವೇಮನ' ಎಂದೂ ಕರೆದರೆ ತಪ್ಪಲ್ಲ'.

| **ಸರ್ವಜ್ಞ** | **ವೇಮನ** |
| --- | --- |
| ಆತುಮನ ಬಣ್ಣವನು । ಮಾತಿನಗದವನು । | ಊರ್ದ್ವ ಲೋಕದಲಿ ಉಚಿತ ಕ್ರಮದಿಂದ |
| ಜಾತಿಯ ನೆಲೆಯನರಿದು ತಾ ಪರಮನಾ । | ರೂಪಮೇನು ಇರದ ರೀತಿಯಲಿ |
| ದಾತನೇ ಯೋಗಿಪ್ಪ ಸರ್ವಜ್ಞ | ಪರಮ ಯೋಗಿ ನೋಳ್ಪ ಪರಮಾತ್ಮನಿರವನು |

ಕರ್ಮ ಪದ್ಧತಿಯ ಕುರಿತು ಈರ್ವರ ಅಭಿಪ್ರಾಯದಲ್ಲಿ ಸಾಮ್ಯತೆ ಇದೆ. ಹುಟ್ಟು ಸಾವುಗಳ ಮಧ್ಯೆ ನಮ್ಮ ಬದುಕು ಇದೆ. ಬಾಳ ಸಂಪುಟದ ಮೊದಲಿನ ಪುಟಗಳು ಹರಿದಿವೆ. ಕೊನೆಯ ಪುಟಗಳು ಹರಿದಿವೆ. ಹೀಗಾಗಿ ಹುಟ್ಟು-ಸಾವುಗಳ ಗುರುತು ತಿಳಿಯದಂತಾಗಿದೆ. ಹುಟ್ಟಿದವನು ಸಾಯಲೇ ಬೇಕು, ಸತ್ತವನು ಹುಟ್ಟಲೇ ಬೇಕು, ಇಲ್ಲದೆ ಹೋದರೆ ಮೂಲ ಸೇರಬೇಕು ಅಥವ ಮೋಕ್ಷ ಪಡೆಯಬೇಕು. ಅದರ ಹಿಂದೆ ಮೊತ್ತೊಂದು ಮೂಲ ಕಾರಣವಿರುತ್ತದೆ. ಬೆಣ್ಣೆಯ ಕಾರ್ಯವೆಂದರೆ ಮೊಸರು ಕಾರಣ, ಮೊಸರು ಕಾರ್ಯವಾದರೆ ಹಾಲು ಕಾರಣ. ಈ ರೀತಿ ನಮ್ಮ ಜನನ ಕಾರ್ಯವಾದರೆ ಅದರ ಹಿಂದಿನ ಕಾರಣವಾವುದು? ನಮ್ಮ ಪೂರ್ವ ಸಂಸ್ಕಾರಗಳೇ ನಮ್ಮ ಹುಟ್ಟಿನ ಕಾರಣವೆಂದು ನಮ್ಮ ಹಿಂದಿನ ದಾರ್ಶನಿಕರು ಕಂಡು ಹಿಡಿದಿದ್ದಾರೆ. ಈ ಸಂಸ್ಕಾರಗಳೆಂದರೇನು? ಎಂಬುದರ ಕುರಿತು ಸರ್ವಜ್ಞ ಮತ್ತು ವೇಮನರು ಸಾಮ್ಯ ನಿಲುವನ್ನೇ ಹೊಂದಿರುತ್ತಾರೆ. ಇಬ್ಬರೂ ಕರ್ಮ ಮಾರ್ಗಗಳನ್ನು ಖಂಡಿಸಿದವರೆ.

ತಮ್ಮ ಹೆಸರುಗಳು ಅಂತ್ಯದಲ್ಲಿ ಬರುವಂತೆ ಇಬ್ಬರೂ ಸಹ ಸುಲಭ ಛಂದಸ್ಸಿನಲ್ಲಿ ಸಾವಿರಾರು ಪದ್ಯಗಳನ್ನು ಹಾಡಿದ್ದಾರೆ. ಇವರ ಪದ್ಯಗಳಲ್ಲಿ ಸಂಖ್ಯಾ ನೀತಿಯನ್ನು ಬಿಟ್ಟರೆ ಉಳಿದೆಲ್ಲ ಶತಕದ ಅಂಶಗಳು ಪುಷ್ಕಳವಾಗಿವೆ. ಸರ್ವಜ್ಞ–ವೇಮನರಿಬ್ಬರು ವೇದ ಪ್ರಾಮಾಣ್ಯವನ್ನು ಅಂಗೀಕರಿಸಲಿಲ್ಲ. ಜಾತಿ, ಮತ, ವರ್ಗರಹಿತ ಸಮಾಜವನ್ನು ಪ್ರಚೋದಿಸಿದರು. ಸರ್ವಜ್ಞನ ದೃಷ್ಟಿಯಲ್ಲಿ ವೇದವೇ ಶ್ರೇಷ್ಠವೆಂದು ಸಾಧಿಸುವುದು ಸರಿಯಲ್ಲ. ವೇದದಲ್ಲೂ ಹೊಸದೇನು? ಅದಕ್ಕಿಂತಲೂ ಅನುಭವದ ವೇದವೇ ಮಿಗಿಲು. ವೇಮನನ ದೃಷ್ಟಿಯಲ್ಲಿ ವೇದ ವಿದ್ಯೆಗಳೆಲ್ಲ ವೇಶ್ಯೆಯರಂತಹವು. ಅವು ನಮ್ಮನ್ನು ಭ್ರಮೆಗೊಳಿಸುತ್ತವೆಯೇ ಹೊರತು ಸ್ಪಷ್ಟತೆಯನ್ನು ಕೊಡುವುದಿಲ್ಲ. ಕರ್ಮ ಮಾರ್ಗವನ್ನು ತೆಗಳಿದ ಸರ್ವಜ್ಞ–ವೇಮನರಿಬ್ಬರು ಆತ್ಮಜ್ಞಾನವನ್ನು ಪ್ರಬೋಧಿಸಿದರು. 'ಚಿಕ್ಕಮನೆ' 'ಸಣ್ಣಶಿಲೆ' ಚಿತ್ರಪಟಗಳಲ್ಲಿ ಇರುವವನು ನಿನ್ನೊಳಗೆ ಇದ್ದಾನೆ ನೋಡಾ, ಎನ್ನುತ್ತಾನೆ ಸರ್ವಜ್ಞ, ದೇವರೆಂಬುವನು ಬೇರೆ ದೇಶದಲಿಲ್ಲ ಸದಾ ಜೀವಿಯೊಡನೆ ದೇಹದೊಳಗಿದ್ದು ಈ ಶರೀರವೆಂಬ ವಾಹನವನ್ನು ಹತ್ತಿ ಅದನ್ನು ಶೀಘ್ರಗತಿಯಲ್ಲಿ ಹೊಡೆಯುತ್ತಿದ್ದಾನೆ. ಅಂದರೆ, ನಮ್ಮ ಇಂದ್ರಿಯಗಳನ್ನು ನೆಡೆಸುವ ಜೀವ ಚೈತನ್ಯವೇ ದೇವರು. ವಿಗ್ರಹಾರಾಧನೆ ಇಬ್ಬರಿಗೂ ಹಿಡಿಸದು. ಸರ್ವಜ್ಞನ ಮತದಲ್ಲಿ ಆತ್ಮದಲ್ಲಿದ್ದ ಆದಿದೇವನನ್ನು ತಿಳಿಯದೇ ಕಲ್ಲು ಗುಂಡುಗಳನ್ನು ನೋಡಿ ನಮಸ್ಕರಿಸುವವರೇ ಮಾದಿಗ. ಎಷ್ಟೇ ಹೇಳಿದರು ಕಲ್ಲು ಗುಂಡು ಈಶನೆಂದು ನಂಬಬಾರದು.

ಕಲ್ಲು ಕಲ್ಲನೆ ಒಟ್ಟಿ ಕಲ್ಲಿನಲಿ ಮನೆಕಟ್ಟಿ
ಕಲ್ಲ ಮೇಲ್ಕಲ್ಲ ಕೊಳುವ ಮಾನವರೆಲ್ಲ
ಕಲ್ಲಿನಂತಹರು ಸರ್ವಜ್ಞ

ಕಲ್ಲುಗಳನ್ನು ತಂದು ಮಾನವರು ರಮ್ಯವಾದ ಗುಡಿಕಟ್ಟಿ ಅದರಲ್ಲಿ ಕಲ್ಲಿನ ಪ್ರತಿಮೆ ಇಟ್ಟು ದೇವರೆಂದು ಭಾವಿಸಿ, ಪೂಜಿಸಿ, ನಮಸ್ಕರಿಸಲು ಅದು ನಮ್ಮನ್ನು ಹರಸುತ್ತದೆಯೇ? ವೇಮನನು ತನ್ನ ಅಭಿಪ್ರಾಯವನ್ನು ಈ ರೀತಿ ಹೇಳಿದ್ದಾನೆ. ಸರ್ವಜ್ಞ–ವೇಮನರಿಬ್ಬರಿಗೂ ತಮ್ಮ ಶಕ್ತಿಯ ಬಗ್ಗೆ ಅಪಾರವಾದ ನಂಬಿಕೆ. ಇಬ್ಬರೂ ಬ್ರಾಹ್ಮಣರಿಗೆ ಏನೂ ತಿಳಿಯದೆಂದೂ, ವೇದಸಾರವೆಲ್ಲ ತಮಗೆ ಗೊತ್ತೆಂದು ಹೇಳಿಕೊಂಡಿದ್ದಾರೆ. ಬ್ರಾಹ್ಮಣರು ಹುಚ್ಚು ನಾಯ್ಗಳಂತೆ ವೇದಗಳನ್ನು ಓದುತ್ತಾರೆಯೆ ಹೊರತು ಅದರ ಆಶಯವನ್ನು ತಿಳಿಯರು. ವೇದಸಾರವೆಲ್ಲ ವೇಮನನಿಗೆ ಗೊತ್ತು ಸರ್ವಜ್ಞ–ವೇಮನರಿಬ್ಬರಲ್ಲೂ ಉದ್ರಿಕ್ತ ಸ್ವಭಾವ ಕಂಡುಬರುತ್ತದೆ. ಓದು ಬರಹದ ನಿರ್ಬಂಧಕ್ಕೆ ಒಳಗಾದವರಲ್ಲ. ಸಹಜವಾಗಿ ಪ್ರವಹಿಸುವ ಕವಿತಾಶಕ್ತಿ ಇಬ್ಬರಲ್ಲೂ ಇದೆ. ಜೀವನದಲ್ಲಿ ಅನೇಕ ದೃಶ್ಯಗಳನ್ನು ನೋಡಿ  ಆ ಅನುಭಾವಗಳನ್ನು ಆಶುವಾಗಿ ಪದ್ಯಗಳಲ್ಲಿ ಹೇಳಿದರು. ಹಾಸ್ಯಪ್ರಿಯತೆ, ಅವಹೇಳನ ಮೂಢನಂಬಿಕೆಗಳ ಖಂಡನೆ ಇಬ್ಬರಲ್ಲಿಯೂ ಕಂಡುಬರುತ್ತದೆ. ನಮ್ಮ ವೇದಾಂತಿಗಳು ಮಂತ್ರಯೋಗ, ರಾಜಯೋಗ, ಹಠಯೋಗ ಮತ್ತು ಲಯಯೋಗ, ವೆಂದು ನಾಲ್ಕು ಯೋಗಗಳನ್ನು ಹೇಳಿದ್ದಾರೆ. ಸರ್ವಜ್ಞ–ವೇಮನರಿಬ್ಬರೂ ಇದಕ್ಕೆ ಭಿನ್ನವಾಗಿ ಸಂಸಾರ ಯೋಗವನ್ನು ಬೋಧಿಸಿದ್ದಾರೆ. ಗೃಹಸ್ಥಾಶ್ರಮವನ್ನು ಪ್ರಶಂಸಿಸಿದ್ದಾರೆ.

ಬೆಚ್ಚನಾ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನರಿವ ಸತಿಯಾಗಿ –ಸ್ವರ್ಗಕ್ಕೆ
ಕಿಚ್ಚು ಹಚ್ಚೆಂದ ಸರ್ವಜ್ಞ

ಸುಗುಣವತಿಯಾದ ಹೆಂಡತಿಯಾಗಿರಲು ಪುತ್ರರೆಲ್ಲಾ ಬುದ್ಧಿವಂತರಾಗಿ ಒಪ್ಪುತಿರಲು ಸಂಸಾರಿಗೆ ಇನ್ನು ಸ್ವರ್ಗವೇಕೆಂದು ಇಬ್ಬರೂ ಗೃಹಿಣಿಯರನ್ನು ಹೊಗಳಿದರು. ಹೆಂಡತಿಯೇ ಎಲ್ಲ ಸುಖಗಳಿಗೆ ಮೂಲವೆಂದರು.

ಹೆಣ್ಣಿನಿಂದಲೆ ಇಹವು ! ಹೆಣ್ಣಿನಿಂದಲೆ ಪರವು
ಹೆಣ್ಣಿನಿಂದಲೆ ಸಕಲ ಸಂಪದವು –ಹೆಣ್ಣೊಲ್ಲ
ದಣ್ಣಗಳು ಯಾರು ಸರ್ವಜ್ಞ

ನಮ್ಮ ಕಾಮನೆಯನ್ನು ಕಟ್ಟಿಕೊಂಡ ಹೆಂಡತಿಯಲ್ಲಿ ತಿರಿಸಿಕೊಳ್ಳಬೇಕು. ಅವಳನ್ನು ಬಿಟ್ಟು ಸೂಳೆಯರಲ್ಲಿಗೆ ಹೋಗುವವನೊಬ್ಬ ಹುಚ್ಚ. ಹೀಗೆ ಮಾಡುವುದು ಚನ್ನಾಗಿ ಬೆಳೆದ ನಮ್ಮ ಭಕ್ತರ ಬೆಳೆಯನ್ನು ಬಿಟ್ಟು ಬೇರೆಯವರ ಹೊಲದಲ್ಲಿ ಅಕ್ಕಲಾಯ್ದು ಕೊಂಡಂತಿರುತ್ತದೆ. ಆದರೆ ಹೆಂಡತಿಯ ಮಾತಿಗೆ ಹೆಚ್ಚಿಗೆ ಕಿವಿಗೊಟ್ಟರೆ ಪ್ರಮಾದವಾಗುತ್ತದೆಂದು ಎಚ್ಚರಿಸಲು ಮರೆತಿಲ್ಲ. ಇಬ್ಬರೂ ಹೆಂಡತಿಯ ಮಾತು ಕೇಳಿ ಅಣ್ಣತಮ್ಮಂದಿರನ್ನು ದ್ವೇಷಿಸಿ ಬೇರೆ ಸಂಸಾರ ಹೂಡುವವನು ಹುಚ್ಚು ನಾಯಿಯ ಬಾಲ ಹಿಡಿದು ಗೋದಾವರಿಯನ್ನು ಈಜಲು ಸಾಧ್ಯವೇ? ಸಂಸಾರದ ಬಗ್ಗೆ ಹೀಗೆ ಹೇಳಿದ ಸರ್ವಜ್ಞ–ವೇಮನರಿಬ್ಬರ ಮಾತುಗಳಿಗೆ ನಾವು ಹೆಚ್ಚು ಬೆಲೆ ಕೊಡಬೇಕು. ಏಕೆಂದರೆ ಇವರಿಬ್ಬರೂ ಪೂರ್ವಾಶ್ರಮದಲ್ಲಿ ಏಕಪತ್ನಿವ್ರತರಲ್ಲ. ಜಾರಸ್ತ್ರೀಯರು, ವೇಶ್ಯೆಯರು ಮುಂತಾದವರಿಗೆ ಒಳಗಾದವರೇ. ಆದ್ದರಿಂದ ಅವರ ಮಾತು ಅನುಭವದಿಂದ ಮಂಡಿತವಾಗಿದ್ದು ಗೃಹಿಣಿಯ ಔನತ್ಯವನ್ನು ಸಾರುತ್ತದೆ. ವೇಶ್ಯೆಯರ ಕಪಟತ್ವವನ್ನು ಕುರಿತು ಇವರು ಹಲವಾರು ಪದ್ಯಗಳನ್ನು ಹೇಳಿದ್ದಾರೆ.

'ಸರ್ವಜ್ಞನು ವೇಮನನಂತೆ. ಬಹಳ ಉದ್ರಿಕ್ತ ಸ್ವಭಾವವುಳ್ಳವನು. ಈತ ಇಹಲೋಕ ಸೌಖ್ಯವನ್ನು ವೇಮನನಿಗಿಂತ ಹೆಚ್ಚು ತೃಪ್ತಿಯಾಗಿ ಪ್ರೀತಿಯಿಂದ ಅನುಭವಿಸಿದವನು. ಈತನ ಸಂಸಾರ ಲಕ್ಷಣವು ಬೆಚ್ಚನೆ ಮನೆ, ವೆಚ್ಚಕ್ಕೆ ಹೊನ್ನು, ಎತ್ತುಗಳು ಎರಡು, ಪುತ್ರರೈದು, ಬತ್ತದಿಹ ಹಯನು, ಕುಂದದಲೆ ಗೆಯ್ವ ಸೊಸೆ, ಒಬ್ಬ ಮುದುಕಿ, ಇಚ್ಛೆಯನು ಅರಿವ ಲೇಸಪ್ಪ ಸತಿ: ಇವು ಇದ್ದರೆ 'ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ, ಹಾಗೆಂದ ಮಾತ್ರಕ್ಕೆ ಈತ ವೇಮನನಿಗಿಂತ ಬುದ್ಧಿವಂತನಾಗಿ ಏಕಪತ್ನಿವ್ರತ ನಡೆಸಿದವನು ಎಂದು ತಿಳಿಯಬೇಡಿ. ಆತನ ಹಾಗೆ ಈತನು ಜಾರಸ್ತ್ರಿಯರು. ವೇಶ್ಯಯರು ಮೊದಲಾದವರಿಗೆ ಒಳಗಾಗಿದ್ದಾನೆ. ಆ ಪ್ರಪಂಚದಲ್ಲಿ ಆತನಿಗಿಂತ ಒಂದು ಕೈ ಹೆಚ್ಚಾಗಿಯೇ ಹೋರಾಡಿದ್ದಾನೆಂದು ಹೇಳಬೇಕಾಗಿದೆ.'

ಸರ್ವಜ್ಞ–ವೇಮನರಿಬ್ಬರೂ ತಮ್ಮ ಜೀವನದ ಪೂರ್ವ ಭಾಗದಲ್ಲಿ ಸಂಸಾರ ಯಾತ್ರೆಗಾಗಿ ರಾಜಸೇವೆ ಮಾಡಿದಂತೆ ಕಾಣುತ್ತದೆ. ಕೊನೆಗೆ ಇಬ್ಬರೂ ವಿರಕ್ತರಾಗಿ ಯೋಗಿಗಳಾದರು. ಈ ಮೇಲಿನ ಎಲ್ಲ ಹೋಲಿಕೆಗಳನ್ನು ಗಮನಿಸಿದಾಗ ಒಬ್ಬರನ್ನು ಇನ್ನೊಬ್ಬರು ಅನುಕರಿಸಿದರೆಂದು ಹೇಳಬೇಕಾಗುತ್ತದೆ. ಯಾರು ಯಾರನ್ನು ಅನುಕರಿಸಿದರು ಎಂದು ನಿರ್ಣಯಿಸುವುದು ಕಷ್ಟ. ಏಕೆಂದರೆ ಈರ್ವರ ಕಾಲ ನಿಶ್ಚಯವಾಗಿ ತಿಳಿಯುವುದಿಲ್ಲ. 'ಉತ್ತಂಗಿ ಚನ್ನಪ್ಪನವರು ಸರ್ವಜ್ಞ ಹದಿನಾರನೇ ಶತಮಾನದವನು ಎನ್ನುತ್ತಾರೆ. ರಾಳ್ಳಪಲ್ಲಿಯವರ ದೃಷ್ಟಿಯಲ್ಲಿ ವೇಮನ ಹದಿನೇಳನೇ ಶತಮಾನದವನು. ಇದು ನಿಜವಾದರೆ ಸರ್ವಜ್ಞನನ್ನೇ ವೇಮನ ಅನುಕರಿಸಿರಬಹುದು. ಆದರೆ ವೇಮನ ತಮಿಳು, ತೆಲಗು ದೇಶದಲ್ಲಿ ಸಂಚರಿಸಿದಂತೆ ತಿಳಿಯುತ್ತದೆಯೆ ಹೊರತು ಕನ್ನಡ ದೇಶದಲ್ಲಿ ಸಂಚಾರ ಮಾಡಿದಂತೆ ಆಧಾರಗಳಿಲ್ಲ. ಸರ್ವಜ್ಞ ಮಾತ್ರ

ತೆಲಗು ದೇಶದಲ್ಲಿ ತಿರುಗಾಡಿದಂತೆ ಗೊತ್ತಾಗುತ್ತದೆ. ಈತನು ತೆಲುಗರನ್ನು ಬೈದ ಕೆಲವು ಪದ್ಯಗಳು ಇವೆ ಎಂದೂ ಕಂಡುಬರುತ್ತದೆ.' ಇವರಿಬ್ಬರಿಗೂ ಯಾರಿಗೆ ಯಾರಾದರೂ ಗುರುವಾಗಬಲ್ಲ ಸಾಮರ್ಥ್ಯವಿದೆ ಎಂಬುದರಲ್ಲಿ ಯಾವ ಸಂದೇಹವಿಲ್ಲ.

## ಸರ್ವಜ್ಞ ಹಾಗೂ ಬಸವಣ್ಣ:

ಒಂದು ದೃಷ್ಟಿಯಿಂದ ಸರ್ವಜ್ಞನೇ ವಚನಕಾರರ ನಿಜವಾದ ಉತ್ತರಾಧಿಕಾರಿ. ಸರ್ವಜ್ಞ ಏನಿಲ್ಲವೆಂದರೂ ವಚನಕಾರರಾದ ಮೇಲೆ ಮುನ್ನೂರು ವರ್ಷಗಳ ನಂತರ ಬದುಕಿದವನು. ಆದ್ದರಿಂದ ಮೇಲಿನ ಹೇಳಿಕೆಯನ್ನು ಸಮರ್ಥಿಸುವುದು ಅಗತ್ಯವೆಂದು ತೋರುತ್ತದೆ. ವಚನಕಾರರು ಪಳಗಿಸಿದ ಕನ್ನಡ ಭಾಷೆಯನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡು ಶ್ರೇಷ್ಠ ಕಾವ್ಯಗಳನ್ನು ರಚಿಸಿದವರು ಹರಿಹರ ರಾಘವಾಂಕರಾಗಿದ್ದಾರೆ. 'ಒಂದು ದೃಷ್ಟಿಕೋನದಿಂದ ಅವರೂ ವಚನಕಾರರ ಉತ್ತರಾಧಿಕಾರಿಗಳೆ. ವಚನ ಪ್ರಕಾರವನ್ನು ಮತ್ತೆ ಹದಿನೈದನೇ ಶತಮಾನದಲ್ಲಿ ಪುನರುಜ್ಜೀವನಗೊಳಿಸಲು ಪ್ರಯತ್ನಿಸಿದ ತೋಂಟದ ಸಿದ್ಧಲಿಂಗಯತಿ ಇತ್ಯಾದಿ ಮಹನೀಯರೂ ಒಂದರ್ಥದಲ್ಲಿ ವಚನಕಾರರ ಉತ್ತರಾಧಿಕಾರಿಗಳೆ. ಆದರೆ ಯಾವ ಸಾಮಾಜಿಕ ಪ್ರತಿಭಟನೆ, ಸಿಡಿತ, ಮಿಡಿತ, ಕೋಪ, ಕೆಳವರ್ಗದವರಿಗಾಗಿ ಕುದಿತ, ವ್ಯವಸ್ಥೆಯ ಬಗ್ಗೆ ಪ್ರತಿರೋಧ, ಪ್ರಭುತ್ವದ ಬಗ್ಗೆ ನಿರ್ಲಕ್ಷ್ಯಗಳಿಗೆ ವಚನಕಾರರು ಸಂಕೇತವಾಗಿ ಪರಿಣಮಿಸಿರುವರೋ ಆ ಒಟ್ಟು ಸಮಗ್ರ ದೃಷ್ಟಿಯಿಂದ ಹೇಳುವುದಾದರೆ ಸರ್ವಜ್ಞನು ವಚನಕಾರರ ನಿಜವಾದ ಉತ್ತರಾಧಿಕಾರಿಯೆನ್ನಿಸಿಕೊಳ್ಳುತ್ತಾನೆ. ವಚನಕಾರರ ಆ ಗುಣಗಳು ಅವರಿಗಿಂತ ಮುಂದಿನ ಅನೇಕ ವೀರಶೈವ ಲೇಖಕರಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಕಾಣಿಸಿಕೊಳ್ಳುವುದಾದರೂ ಅವುಗಳ ಸಮಗ್ರ ಸಾಕ್ಷಾತ್ಕಾರವಾಗುವುದು. ಅವರ ಬಳಿಕ ಸರ್ವಜ್ಞನಲ್ಲೇ ಎಂದು ಹೇಳುವುದರಲ್ಲಿ ಉತ್ಪ್ರೇಕ್ಷೆ ಏನೂ ಕಾಣದು.'

ವಚನಕಾರರು ಯಾವ ಧಾರ್ಮಿಕ ಸಂಪ್ರದಾಯ ಒಪ್ಪಿಕೊಂಡರೋ ಅದಕ್ಕೂ ಸರ್ವಜ್ಞನಿಗೂ ಹೇಗೆ ಸಂಬಂಧ ಕಲ್ಪನೆಯಾಯಿತೆಂಬುದು ಬಹುಶಃ ಕೊನೆಯವರಗೂ ಅಜ್ಞಾತವಾಗಿ ಉಳಿಯುತ್ತದೆ. ಅವನ ವಚನ ರಚನೆಗಳಲ್ಲಿ ಬರುವ ಷಟ್ಸ್ಥಲದ ಪ್ರಸ್ತಾಪವು ಇಷ್ಟಲಿಂಗ ಜಂಗಮಗಳನ್ನು ಹೊಂದಿರುವುದು, ಬಸವಣ್ಣನವರನ್ನು ಗೌರವದಿಂದ ಸ್ಮರಿಸಿರುವುದು ಇತ್ಯಾದಿ ಅಂಶಗಳು ಅವನಿಗೂ ವೀರಶೈವ ಸಂಪ್ರದಾಯಕ್ಕೂ ಇದ್ದ ನಿಕಟ ಸಂಬಂಧವನ್ನು ಸೂಚಿಸುತ್ತವೆ. ಸರ್ವಜ್ಞನನ್ನು ಯಾವುದಾದರೂ ಧರ್ಮದ ಚೌಕಟ್ಟಿಗೆ ಸಂಬಂಧಿಸಿ ನೋಡುವುದಾದರೆ ವೀರಶೈವ ಧರ್ಮದವನೆಂದು ಪರಿಗಣಿಸಬೇಕಾಗುತ್ತದೆ. ಅವನಿಗಿದ್ದ ಹಿನ್ನೆಲೆ ಎಂದರೆ ವಚನಕಾರರು. ವಾಸ್ತವವಾಗಿ ವಚನಕಾರರ ವೈಚಾರಿಕ ಪ್ರಖರತೆಯು ತಣ್ಣಗಾಗಿ ಅದೊಂದು ಸಾಂಪ್ರದಾಯಿಕ ಮತವಾಗಿ ನೆಲೆ ನಿಂತಿದ್ದ ಕಾಲದಲ್ಲಿ ಅವನ ಆದರ್ಶ ಪ್ರಪಂಚದಲ್ಲಿ ಇದ್ದವರು ವಚನಕಾರರು. ವಚನಕಾರರಂತೆ ಸರ್ವಜ್ಞನು ಸಮಕಾಲೀನ ಸಮಾಜದ ಏಳ್ಗೆಗಾಗಿ ಹಂಬಲಿಸಿದ್ದಾನೆ. ಅಂದಿನ ಸಮಾಜದ ವ್ಯವಸ್ಥೆಯನ್ನು ಅಂತರಂಗದಲ್ಲಿ ಕಂಡು ಕಟುವಾಗಿ ಟೀಕಿಸಿದ್ದಾನೆ. ಬೇರೆ ಬೇರೆ ಜಾತಿಗಳ ಬಗ್ಗೆ ಅಂದರೆ ಅಕ್ಕಸಾಲಿಗ, ಬಡಿಗ, ಬಣಜಿಗ, ಶರದ, ಪಂಚಾಳ, ಜಾಲಗಾರ, ಗಾಜುಗಾರ, ಗಾಣಿಗ, ಜೇಡ, ಬೇಡ, ಬೆಸ್ತ, ಡೊಂಬ. ಸುಂಕಿಗ, ಶೂದ್ರ ಮತ್ತು  ಕೊಂಡೆಯಾ ಇವರ ಹೆಸರು ಹೇಳಿ ನಿಷ್ಠುರವಾಗಿ ಖಂಡಿಸುವವರು ಅಪರೂಪ. ಅದರಂತೆ ಧಾರ್ಮಿಕ ಡಾಂಭಿಕತನ, ಕಪಟ ಸನ್ಯಾಸಿಗಳು, ಜಾರರು, ಚೋರರು ಮತ್ತು ಜೂಜುಗಾರರು ಎಲ್ಲರೂ ಇವನ ಚಾಟಿ

ಏಟಿಗೆ ಗುರಿಯಾಗಿದ್ದಾರೆ ಎಂದು ಎ.ಆರ್. ಕೃಷ್ಣಶಾಸ್ತ್ರಿಗಳು ಹೇಳುವ ಮಾತಿನಲ್ಲಿ ಹೇಳುವುದಾದರೆ, ಇವನ ಬರವಣಿಗೆ 'ದನದಂತೆ ನುಗ್ಗುತ್ತದೆ'. ಅದರ ಜೊತೆಗೆ ಸಮಾಜದಲ್ಲಿ ಉತ್ತಮವಾದದ್ದನ್ನು ಕಂಡಾಗ ಸಂಕೋಚವಿಲ್ಲದೆ ಮೆಚ್ಚಿದ್ದಾನೆ.

ವಚನಕಾರರು ಪ್ರತಿಪಾದಿಸಿದ ದಯೆ, ಧರ್ಮ, ಜಾತಿಮತಗಳ ಅಂತರ ನಿವಾರಣೆ, ಉಚ್ಚ. ನೀಚ ಎಂಬ ಭಾವನೆಯ ನಿರೋಧ, ಷಟ್ಸ್ಥಲ, ಅಷ್ಟಾವರಣ, ಪಂಚಾಚಾರವೇ ಮುಂತಾದ ಆಚರಣೆಗಳನ್ನು ಸರ್ವಜ್ಞನೂ ಅನುಸರಿಸಿದ್ದಾನೆ. ಪ್ರಾಚೀನ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾನೆ. ಪ್ರಸ್ತುತ ಸರ್ವಜ್ಞನ ಒಂದೊಂದು ವಚನವನ್ನು ಪ್ರಾಚೀನ ವಚನಕಾರರ ವಚನಗಳೊಂದಿಗೆ ತುಲನಾತ್ಮಕವಾಗಿ ವಿವೇಚಿಸುವುದಕ್ಕೆ ತೊಡಗದೆ, ಸರ್ವಜ್ಞನ ಕೆಲವು ವಚನಗಳಿಗೂ ಪ್ರಾಚೀನರ ವಚನಗಳಿಗೂ ಇರುವ ಅಭಿಪ್ರಾಯದ ಸಾಮ್ಯವನ್ನು ನಿರೂಪಿಸುವುದಕ್ಕೆ ಯತ್ನಿಸಲಾಗಿದೆ.

ಮನೆಯಿಂದ ಬಹಿಷ್ಕೃತನಾಗಿ ಹೊರಬಿದ್ದ ಅವನು ಲೋಕದಲ್ಲಿ ತಾನು ಕಂಡದ್ದರ ಬಗ್ಗೆಯೆಲ್ಲಾ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತ 'ಏಕ'ವಾಗಿ ಉಳಿದದ್ದನ್ನು ಹೇಳಿಕೊಂಡಿದ್ದಾನೆ. ಯಾವುದಕ್ಕೂ ಯಾರಿಗೂ ಅಂಟಿಕೊಳ್ಳದೆ ಈ ಪ್ರಪಂಚದಲ್ಲಿ ಏಕಾಂಗಿಯಾಗಿ ಸ್ವತಂತ್ರ ವ್ಯಕ್ತಿಯಾಗಿ ಬದುಕಿದವನು. ಏಕಾಂಗಿಯಾದರೂ ಒಂಟಿತನ ಅವನನ್ನು ಕಾಡಲಿಲ್ಲ. ಆ ಕಾಲದ ಜನಗಳ ಮಧ್ಯೆ ಓಡಾಡಿಕೊಂಡು ಅವರ ಜೊತೆ ಬೆರೆತುಕೊಂಡು ಬದುಕಿನ ಮಾರ್ಗ ಕಂಡುಕೊಂಡು ಇತರರಿಗೂ ಆ ಮಾರ್ಗವನ್ನು ತೋರಿಸಿ ಎಲ್ಲರೊಂದಿಗೆ ಬೆರೆತ ಸರ್ವಜ್ಞನಿಗೂ, ವಚನಕಾರರಿಗೂ ಬಹುದೊಡ್ಡ ಹೋಲಿಕೆ ಇರುವುದು ಕಂಡುಬರುತ್ತದೆ. ಅತಿ ಮುಖ್ಯವಾಗಿ ನಾವು ಗಮನಿಸಬೇಕಾದದ್ದು ಬಸವಣ್ಣ ಮತ್ತು ಸರ್ವಜ್ಞ, ಹುಟ್ಟಿದಾರಾಭ್ಯದಿಂದಲೇ ಕುಟುಂಬವನ್ನು ಧಿಕ್ಕರಿಸಿ ಬಂದವರು.

ಸರ್ವಜ್ಞನ ಹುಟ್ಟು ತಂದೆ–ತಾಯಿಯರ ವಿಷಯದ ಬಗ್ಗೆ ನಮಗಿರುವ ಅರಿವು ಏನೇನೂ ಸಾಲದು. ಅವನ ತ್ರಿಪದಿಗಳನ್ನು ನೋಡಿದರೆ ಅವನ ತಂದೆ ಬ್ರಾಹ್ಮಣನಾಗಿದ್ದ ಬಸವರಸನೆಂದು, ಅವನು ಯಾತ್ರಾರ್ಥವಾಗಿ ಕಾಶಿಗೆ ಹೋಗಿ ವಿಶ್ವನಾಥನಲ್ಲಿ ಒಂದು ಗಂಡು ಮಗುವನ್ನು ಬೇಡಿಕೊಂಡನು. ಆಗ ಶಿವನು ಇವನ ಭಕ್ತಿಗೆ ಮೆಚ್ಚಿ ಪ್ರಸನ್ನನಾಗಿ ಒಂದು ಅನ್ನದ ಉಂಡೆಯನ್ನು ತಂದು ಪಿಂಡಪ್ರಸಾದವನ್ನು ನುಂಗು. ನೀನು ಮೊದಲು ಎಲ್ಲಿ ಗರ್ಭದಾನ ಮಾಡುವಿಯೋ ಅಲ್ಲಿ ನಿನಗೊಬ್ಬ ವಿಶೇಷ ಪುತ್ರನು ಹುಟ್ಟುವನೆಂದು ಹೇಳಿದನು. ಈ ಪ್ರಕಾರ ವರವನ್ನು ಪಡೆದು ಬಸವರಸನು ತೀರ್ಥಯಾತ್ರೆಯನ್ನು ಪೂರೈಸಿ ಮಾಸೂರಿನಲ್ಲಿದ್ದ ತನ್ನ ಮನೆಗೆ ಹಿಂದಿರುಗಿ ಬರುತ್ತಿರುವಾಗ ದಾರಿಯಲ್ಲಿ ಅಂಬಲೂರು ಎಂಬ ಗ್ರಾಮದೊಳು ಉಳಿದುಕೊಂಡನು. ಮಾರ್ಗಾಯಾಸದಿಂದ ಹಸಿದಿದ್ದ ಇವನು ಅಡುಗೆಗೆ ಹೊಸ ಗಡಿಗೆ ಮಡಿಕೆಗಳನ್ನು ಕೊಂಡುಕೊಳ್ಳುವುದರ ಉದ್ದೇಶದಿಂದ ಅಲ್ಲಿಯೆ ಮಾಳಿ ಎಂಬ ಕುಂಬಾರ ಸ್ತ್ರೀಯ ಮನೆಗೆ ಹೋಗಿ ಬೇಕಾದ ಪಾತ್ರೆಗಳನ್ನು ತೆಗೆದುಕೊಂಡು ಒಂದು ಬಾವಿಯ ಸಮೀಪದಲ್ಲಿ ಅಡುಗೆಗೆ ಮೊದಲು ಮಾಡುತ್ತಾನೆ.

ಆಕಾಶದಲ್ಲಿ ಮೋಡ ಮುಸುಕಿ ಭಯಂಕರವಾದ ಮಳೆ ಸುರಿಯಲಾರಂಭಿಸಿತು. ಹಸಿದು ಕಂಗಾಲಾಗಿದ್ದ ಬಸವರಸನು ಮಳೆಯಲ್ಲಿ ತೋಯಿಸಿಕೊಂಡು ಆಶ್ರಯವನ್ನು ಹುಡುಕುತ್ತ ಆಗಲೇ ಪರಿಚಿತಳಾಗಿದ್ದ ಮಾಳಿ ಎಂಬ ಆ ಕುಂಬಾರ ವಿಧವೆಯ ಬಳಿಗೆ ಹೋಗಲು, ಅವಳು ಇವನನ್ನು ಮನೆಯೊಳಗೆ ಸೇರಿಸಿಕೊಂಡು ಶೈತ್ಯೋಪಚಾರ ಮಾಡಿದಳು. ಆಕೆಯು ಪುಷ್ಪಳು, ಸುಂದರಳೂ ಆಗಿದ್ದರಿಂದ ಇಬ್ಬರಲ್ಲಿ ಸಹಜವಾಗಿ ಪರಸ್ಪರ ಮೋಹವುಂಟಾಗಿ ಮಳೆಯು

ಭೋರ್ಗರೆಯುತ್ತಿರಲು ಯಾರೂ ಬಾರದಂತಾಗಿ ಯಾವ ಅಭ್ಯಂತರವಿಲ್ಲದೆ ಅವರ ಭೋಗೇಚ್ಛೆಗೆ ಅನುಕೂಲವಾಯಿತು. ತಾಯಿಯು ಕುಂಬಾರಗಿತ್ತಿಯಾದ ಮಾಳಿಯೆಂದು ಅವರಿಬ್ಬರ ಅನೈತಿಕ ಸಂಬಂಧದಿಂದ ಹುಟ್ಟಿದ ಶಿಶು ಸರ್ವಜ್ಞನೆಂದು ತಿಳಿದು ಬರುತ್ತದೆ. ನೀನು ಯಾರ ಮಗ ಎಂದು ಪ್ರಶ್ನಿಸಿದಾಗ ಸರ್ವಜ್ಞ ಸಹಜವಾಗಿಯೇ ತಾನು ಶಿವನ ಮಗನೆಂದು ಉತ್ತರ ಕೊಟ್ಟಿದ್ದಕ್ಕೆ ಅವನನ್ನು ಮನೆಯಿಂದ ನೂಕಿಬಿಟ್ಟರು ಎಂಬ ಸಂಗತಿಯನ್ನು ಸ್ವತಃ ಸರ್ವಜ್ಞನೇ ಹೇಳಿಕೊಂಡಿರುವದನ್ನು ಕಾಣಬಹುದು.

ಮಾಳನು ಮಾಳಿಯು । ಕೂಳ್ ತಿಂದ ಹೆಮ್ಮೆಯಲಿ
ಕೇಳೆ ನೀನಾರ ಮಗನೆಂದು ನಾ ಶಿವನ
ಮೇಳದಣುಗೆಂಬೆ ಸರ್ವಜ್ಞ॥

ತಂದೆ ಹಾರುವನಲ್ಲ ತಾಯಿ ಮಾಳಿಯು ಅಲ್ಲ
ಚಂದ್ರಶೇಖರನ ವರಪುತ್ರ ನಾ ನಿಮ್ಮ
ಕಂದನಲ್ಲೆಂಬೆ ಸರ್ವಜ್ಞ॥

ನೂಕಿದವರಾಗ ಕೂಕಟಿಯವನನು
ಲೋಕದೊಳಗೆಲ್ಲ ಕಂಡುದ ನುಡಿವುತ
ಏಕವಾಗಿಹೆನು ಸರ್ವಜ್ಞ॥

ಈ ಮೇಲೆ ಹೇಳಿದಂತೆ ಸರ್ವಜ್ಞನಿಗೆ ಶಿವನೇ ತಂದೆಯಾದ. ಬಸವಣ್ಣನವರ ಜನನ, ಬಾಲ್ಯ ಅವರ ಬದುಕಿನ ಇತಿಹಾಸವನ್ನು ಪರಿಶೀಲಿಸಿ ನೋಡಿದಾಗ ತರ್ದವಾಡಿ ನಾಡಿನ ಬಾಗೇವಾಡಿ ಬಸವಣ್ಣನ ಊರು. ಇದು ಈಗಿನ ಬಿಜಾಪುರ ಜಿಲ್ಲೆಯ ಅದೇ ಹೆಸರಿನ ತಾಲೂಕಿನ ಪ್ರಮುಖ ಊರು. ಇದೊಂದು ಸುಪ್ರಸಿದ್ಧ ಅಗ್ರಹಾರವಾಗಿದ್ದಿತು. ಆ 'ಅಗ್ರೇಶ್ವರದ ನಾಯಕನಾಗಿದ್ದ ಮಾದಿರಾಜ ಆತನ ಪತ್ನಿ ಇಂಗಳೇಶ್ವರದ ಮಾದಲಾಂಬೆ, ಇವರು ಸಾಂಖ್ಯಾಯನ ಗೋತ್ರದ ಕಮ್ಮೆಕುಲದ ಶೈವಬ್ರಾಹ್ಮಣರು. ಇವರಿಗೆ ಬಹಳ ವರ್ಷಗಳ ಕಾಲ ಮಕ್ಕಳಾಗಲಿಲ್ಲ ನಂತರ ವೃಷಭನೋಂಪಿ ಅಥವಾ ನಂದಿನಾಥನ ನೋಂಪಿ ವ್ರತದಿಂದ ಮಾದಲಾಂಬೆಗೆ ಸುಮೂಹರ್ತದಲ್ಲಿ ಒಂದು ಶಿವನ ಶಿಶು ಜನಿಸಿತು. ಹುಟ್ಟಿದ ಮಗುವಿಗೆ ಜಾತಕರ್ಮಾದಿಗಳನ್ನು ಮಾಡಿ 'ಬಸವ' (ವೃಷಭ) ಎಂದು ಹೆಸರಿಟ್ಟರು.

'ಬಸವ ಬೆಳೆಯುತ್ತ ಬೆಳೆಯುತ್ತ ಅಂದಿನ ಕಾಲದ ಮೂಢನಂಬಿಕೆ ಕಂದಾಚಾರ, ಕಂಡು ಮನದಲ್ಲೆ ಬೇಸತ್ತು. ಆ ಬಾಲಬಸವನಿಗೆ ಅಂದಿನ ವಿಚಾರಗಳು ಜಡವಾಗಿ ಕಂಡವು. ಮುಂದೆ ಈ ಆಚರಣೆಗಳೆಲ್ಲ ಆ ಬಾಲ ಮನಸ್ಸಿಗೆ ಹಿಡಿಸದಾಗಿ ಸುತ್ತಮುತ್ತಲಿನ ಪರಿಸರ ಹಾಗೂ ತಾಯಿ-ತಂದೆಯರಲ್ಲಿ ವಿರಸ ಮೂಡಿತು. ತಾನಿದ್ದ ವೈದಿಕ ಸಮಾಜದಲ್ಲಿ ತಾನಿನ್ನು ಇರುವುದು ಅಸಾಧ್ಯವೆಂದೆನಿಸಿ, ಹದಿನಾರರ ಯೌವನದಲ್ಲಿ ಯಜ್ಞೋಪವಿತವೊಂದು ಕರ್ಮಲತೆಯಂತೆ ದೇಹದ ಮೇಲೆ ತೂಗುತ್ತಿತ್ತು. ಅದನ್ನು ಕಿತ್ತೊಗೆದು, ಬ್ರಾಹ್ಮಣತ್ವವನ್ನು, ಜನಿವಾರವನ್ನು ಧೀಕ್ಷೆಯನ್ನು ದಿಕ್ಕರಿಸಿ ಅವನಿಗೂ

ಬ್ರಾಹ್ಮಣ್ಯಕ್ಕೂ ಇದ್ದ ಸಂಬಂಧವನ್ನು ಸಂಪೂರ್ಣವಾಗಿ ಕಡಿದು ಹಾಕಿ ತನ್ನೊಡೆಯ ಕೂಡಲ ಸಂಗಮನಿಗಾಗಿ ಹಂಬಲಿಸಿ ಕುಟುಂಬ ಧಿಕ್ಕರಿಸಿ ಬಂದವನು ಬಸವಣ್ಣ.'

ಇವರೀರ್ವರ ಹೋಲಿಕೆ ಬಾಲ್ಯದಾರಂಭದಿಂದಲೇ ಹುಟ್ಟಿಕೊಂಡಿರಬೇಕಾದರೆ, ಅವರು ಸಮಾಜ ಪರಿವರ್ತನೆಯಲ್ಲಿ ತೊಡಗಬೇಕಾದ ಇನ್ನೆಷ್ಟೋ ಹೋಲಿಕೆಗಳು ಇವರೀರ್ವರಲ್ಲಿ ಸರಿಸಮನಾಗಿ ನಿಲ್ಲುತ್ತವೆ. ಜಾತಿ, ಧರ್ಮ, ನೀತಿ, ಮತ, ಸಮಾಜ, ಕುಟುಂಬ, ಹೆಣ್ಣು–ಗಂಡು, ಮೇಲೂ–ಕೀಳು, ಬಡವ–ಬಲ್ಲಿದ ಹೀಗೆ ಹತ್ತು ಹಲವು ಬಗೆಗಳಲ್ಲಿ ಅವರ ಬಯಕೆಗಳು ಒಂದೇ ಆಗಿರುವುದನ್ನು ಈ ಕೆಳಗಿನಂತೆ ಕಾಣಬಹುದು.

ಉಣಬಂದ ಜಂಗಮಕೆ ಉಣಬಡಿಸಲೊಲ್ಲದೆ
ಉಣದಿಪ್ಪ ಲಿಂಗಕುಣಬಡಿಸಿ ಕೈಮುಗಿವ
ಬಣಗುಗಳ ನೋಡ **ಸರ್ವಜ್ಞ**

ಇದೇ ಅಭಿಪ್ರಾಯವನ್ನು ತಮ್ಮ ವಚನದಲ್ಲಿ ವ್ಯಕ್ತಪಡಿಸಿರುವ ಬಸವಣ್ಣನವರು,

ಕಲ್ಲನಾಗರ ಕಂಡರೆ ಹಾಲನೆರೆ ಎಂಬರು
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ
ಉಂಬ ಜಂಗಮ ಬಂದರೆ ನಡೆಯೆಂಬರು
ಉಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ
ನಮ್ಮ ಕೂಡಲ ಸಂಗನ ಶರಣರ ಕಂಡು
ಉದಾಸೀನವ ಮಾಡಿದರೆ ಕಲ್ಲತಾಗಿದಮಿಟ್ಟೆಯಂತಪ್ಪರಯ್ಯಾ **ಕೂಡಲಸಂಗಮದೇವ.**

ಮನೆಗೆ ಬಂದ ಜಂಗಮನಿಗೆ ಉಣಬಡಿಸದೆ ಹಾಗೇಯೆ ಕಳುಹಿಸುವುದು, ಉಣದಿದ್ದ ಲಿಂಗಕ್ಕೆ ಭಕ್ಷ್ಯ ಭೋಜ್ಯಗಳನ್ನು ಮಾಡಿ ನೈವೇದ್ಯ ನೀಡುವುದನ್ನು ಸರ್ವಜ್ಞ ಕಟುವಾಗಿ ಖಂಡಿಸುತ್ತಾನೆ. ಇದೇ ವಚನದಂತೆ ಬಸವಣ್ಣನವರೂ ಕಲ್ಲ ನಾಗರ ಕಂಡರೆ ಹಾಲನೆರೆದು, ದಿಟದ ನಾಗರ ಕಂಡರೆ ಕೊಲ್ಲೆಂಬುವ ಮೂರ್ಖ ಮನುಜರನ್ನು ವಿಡಂಬಿಸುತ್ತಾನೆ. ಹೀಗೆ ಈರ್ವರ ನಿಲುವುಗಳು ಒಂದೇ ಇರುವುದನ್ನು ಮನಗಾಣಬಹುದು.

ಸರ್ವಜ್ಞನನು ಸಾಮಾಜಿಕ ಜೀವನದ ಜನರ ನಡೆ–ನುಡಿಗಳ ಜಾಗೃತಿಯನ್ನು ಕುರಿತು ತನ್ನ ವಚನದಲ್ಲಿ ಹೀಗೆ ಹೇಳುತ್ತಾನೆ.

ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿದ್ದ ಧರ್ಮ ಹೊಡೆಮರಳಿ ಕಚ್ಚುವ
ಹೆಡೆನಾಗ ನೋಡ **ಸರ್ವಜ್ಞ**

ಇದೇ ಅಭಿಪ್ರಾಯವನ್ನು ಹೊಂದಿರುವ ಬಸವಣ್ಣನವರ ವಚನ ಹೀಗಿದೆ.

ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ

ಹಿಡಿದಿದ್ದ ಲಿಂಗವು ಘಟಸರ್ಪನಂತೆ
ನುಡಿಯಲು ಬಾರದು ನಡೆಯಲು ಬಾರದು
ಲಿಂಗದೇವನೆ ದಿಬ್ಬವೊ ಅಯ್ಯಾ
ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ
ಕಡೆದಾಂಟದು ಕಾಣಾ **ಕೂಡಲಸಂಗಮದೇವ.**

ನಡೆ ನುಡಿಯಲ್ಲಿ ಜಾಗ್ರತೆ ತಪ್ಪಿದರೆ ಅನುಸರಿಸುವ ಧರ್ಮವು ಹೊಡೆಮರಳಿ ಕಚ್ಚುವ ವಿಷ ಸರ್ಪಕ್ಕೆ ಹೋಲಿಸಿದ ಇಬ್ಬರ ನೀತಿ ಒಂದೇ ಆಗಿರುವುದನ್ನು ಕಾಣಬಹುದು.

ಪ್ರಾಚೀನ ಕಾಲದಿಂದಲೂ ಮಾನವನ ಬದುಕಿನಲ್ಲಿ ಸ್ನೇಹ–ಸಹವಾಸಕ್ಕೆ ತನ್ನದೇ ಆದ ಇತಿಹಾಸವಿದೆ. ಸರ್ವಜ್ಞನ ವಚನಗಳಲ್ಲಿ ಇದು ಸ್ಥಾನಪಡೆದಿರುವುದನ್ನು ಕಾಣಬಹುದು. ಸಜ್ಜನರನ್ನು, ದುರ್ಜನರನ್ನು ಕುರಿತು ಸರ್ವಜ್ಞ ಈ ರೀತಿ ಹೇಳುತ್ತಾನೆ.

ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ
ದುರ್ಜನರ ಸಂಗದೊಡನಾಟ ಬಚ್ಚಲ
ರೊಚ್ಚಿನಂತಿಹುದು **ಸರ್ವಜ್ಞ**

ಇದೇ ಅರ್ಥವನ್ನು ಬಸವಣ್ಣನವರ ವಚನದಲ್ಲಿ ಹೀಗೆ ಕಾಣಬಹುದು.

ಸಾರ ಸಜ್ಜನರ ಸಂಗ ಲೇಸು ಕಂಡಯ್ಯ
ದೂರ ದುರ್ಜನರ ಸಂಗ ಭಂಗವಯ್ಯಾ
ಸಂಗವೆರಡುಂಟು ಒಂದ ಬಿಡು ಒಂದ ಹಿಡಿ
ಮಂಗಳ ಮೂರ್ತಿ **ಕೂಡಲಸಂಗಮದೇವ.**

ಸಜ್ಜನರ ಸಹವಾಸದ ಪರಿಯನ್ನು ವಿವರಿಸಿ ಹೇಳುವಲ್ಲಿ ಅವರು ನೀಡಿರುವ ದೃಷ್ಟಾಂತಗಳು ಒಂದೇ ಆಗಿರುವುದನ್ನು ಅವಲೋಕಿಸಬಹುದು.

ಜಾತಿ ಪದ್ಧತಿಯಂತೂ ವೇದಗಳಾದಿಯಾಗಿ ಕಾವ್ಯ–ಮಹಾಕಾವ್ಯಗಳಲ್ಲಿ ವಿವರಿಸುವಂತೆ ವಚನಗಳಲ್ಲಿ ಈ ರೀತಿ ಹೇಳುತ್ತಾನೆ.

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರೆ ಕುಲಗೋತ್ರ
ನಡುವೆ ಎತ್ತಣದು **ಸರ್ವಜ್ಞ**

ಬಸವಣ್ಣನವರು ಹೀಗೆ ಹೇಳುತ್ತಾರೆ.

ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ

ಜಲವೊಂದೆ ಶೌಚಾಚಮನಕ್ಕೆ

ಕುಲವೊಂದೆ ತಾನರಿದವಂಗೆ

ಫಲವೊಂದೆ ಷಡುದರುಶನ ಮುಕ್ತಿಗೆ

ನಿಲವೊಂದೆ **ಕೂಡಲಸಂಗಮದೇವಾ** ನಿಮ್ಮ ಅರಿದವಂಗೆ.

ಹೀಗೆ ಜಾತಿ ವ್ಯವಸ್ಥೆಯ ಬಗ್ಗೆ ಸರ್ವಜ್ಞ ಮಾತನಾಡುವಾಗ **'**ಯಾತರದ ಹೂವದು ನಾತರದು ಸಾಲದೆ ಜಾತಿ–ವಿಜಾತಿಯೆನಬೇಡ ಶಿವನೊಲಿದಾತನೆ ಜಾತ **ಸರ್ವಜ್ಞ'** ಎಂಬ ಸರ್ವಜ್ಞನ ತ್ರಿಪದಿಯಲ್ಲಿ ಜಾತಿ ಕುರಿತು ಹೀಗೆ ಹೇಳಿದರೆ, ವೀರಶೈವ ಧರ್ಮಕ್ಕೆ ಸೇರಿ ಭವಿತನವನ್ನು ಕಳೆದುಕೊಂಡು ಭಕ್ತರಾದವರು ತಮ್ಮ–ತಮ್ಮಲ್ಲಿ ಜಾತಿ ವರ್ಣಗಳನ್ನು ಹುಡುಕಕೂಡದು. ಅರ್ಥವಿಲ್ಲದ ಆಚಾರಗಳನ್ನು ಬಸವಣ್ಣನವರು ಬಲವಾಗಿ ಖಂಡಿಸಿದರು. ಶ್ವಪಚೋಪಿಯಾದಡೆನು ಶಿವಭಕ್ತನೆ ಕುಲಜನು, ಎಂಬ ಬಸವಣ್ಣವನರ ಉಕ್ತಿಯನ್ನು ನೆನೆಪಿಗೆ ತರುತ್ತದೆ.

ವಚನಗಳಲ್ಲಿ  ಬಿಡಿಬಿಡಿಯಾಗಿರುವ ಮುತ್ತುಗಳಿರುವುದನ್ನು ಒಂದೊಂದು ಮಾತುಗಳನ್ನು ಗಣಿಯಿಂದ ತೆಗೆದ ಮಣಿಯಂತೆ ಹದವರಿತು ಪೋಣಿಸುವ ಬಗೆಯನ್ನು ಬಸವಣ್ಣ ಹಾಗೂ ಸರ್ವಜ್ಞ ಹೇಳುವ ರೀತಿ ಬೇರೆಯಾದರೂ ಅರ್ಥವಂತಿಕೆ ಒಂದೇ ಬಗೆಯಾಗಿ ಮಡುಗಟ್ಟಿ ನಿಂತಿರುವುದನ್ನು  ಗಮನಿಸಬಹುದು.

ನುಡಿದಡೆ ಮುತ್ತಿನ ಹಾರದಂತಿರಬೇಕು

ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು

ನುಡಿದಡೆ ಸ್ಪಟಿಕದ ಸಲಾಕೆಯಂತಿರಬೇಕು

ನುಡಿದಡೆ ಲಿಂಗಮೆಚ್ಚಿ ಅಹುದಹುದೆನಬೇಕು

ನುಡಿಯೊಳಗಾಗಿ ನಡೆಯದಿದ್ದಡೆ

ಕೂಡಲಸಂಗಮದೇವನೆಂತೊಲಿವನಯ್ಯಾ (ಬ.ವ.೮೦೨)

ಮಾತಿನಿಂ ನಗೆನುಡಿಯು । ಮಾತಿನಿಂ ಹಗೆ ಕೊಲೆಯು ।

ಮಾತಿನಿಂ ಸರ್ವ ಸಂಪದವು ಲೋಕಕ್ಕೆ ।

ಮಾತೆ ಮಾಣಿಕವು ಸರ್ವಜ್ಞ ॥೧೩೪೩॥

ಮಾತು ಬಲ್ಲಾತಂಗೆ । ಮಾತೊಂದು ಮಾಣಿಕವು ।

ಮಾತ ತಾನರಿಯ ದಧಮಂಗೆ ಮಾಣಿಕವು ।

ತೂತು ಬಿದ್ದಂತೆ ಸರ್ವಜ್ಞ ॥೧೩೫೩॥

ಇಲ್ಲಿ ಬಸವಣ್ಣ ಹಾಗೂ ಸರ್ವಜ್ಞ ಶ್ರೇಷ್ಠವಾದ ನುಡಿ ಹೇಗಿರಬೇಕೆಂಬ ಕಲ್ಪನೆಯನ್ನು ತಂದುಕೊಡುವುದಕ್ಕಾಗಿ ಬಳಸಿರುವ ಉಪಮೆಗಳು ಅಂತರಂಗದ ಗುಣಗಳ ವಿಕಾಸದಿಂದ ಉಪಮಾಕೃತಿಯನ್ನು ರೂಪಿಸಿ ಒಟ್ಟಂದದಲ್ಲಿ ಮಾತಿನ ಅಥವಾ ನುಡಿ ಸಮೂಹದ ಪರಿಣಾಮ ಮತ್ತು ಶ್ರೇಷ್ಠತೆಯ ಅನುಭವವನ್ನು ಒದಗಿಸುತ್ತಾರೆ. ಮುತ್ತಿನಹಾರ, ಮಾಣಿಕ್ಯದ

ದೀಪ್ತಿ, ಸ್ಫಟಿಕದ ಸಲಾಕೆ, ಇಂತಹ ನುಡಿ ಮತ್ತು ನಡೆಯ ಸಾಮರಸ್ಯದಿಂದ ಸರ್ವವನ್ನು ಸಂಪಾದಿಸಬಹುದು ಎಂಬುದು ಇವರಿಬ್ಬರ ವಿಚಾರವಾಗಿದೆ.

ಆ ಶಬ್ದಗಳಿಗಿರುವ ಅರ್ಥಪ್ರಭೆ, ಆಂತರಿಕ ಕ್ರಾಂತಿಯನ್ನು ಅರ್ಥೈಸುತ್ತ ಹೋದಂತೆ ಅನೇಕ ಮಗ್ಗುಲುಗಳಲ್ಲಿ ಆ ಶಬ್ದಗಳ ಕಾಂತಿಯ ವಲಯವನ್ನು ವಿಸ್ತರಿಸುತ್ತ ಹೋದಂತೆ ನುಡಿ ಮತ್ತು ಮಾತಿಗೆ ಸೌಂದರ್ಯದ ಒಲವು ವ್ಯಾಪಕವಾಗಿ ಹೆಚ್ಚಿ ಆ ಶಬ್ದಗಳ 'ಧ್ವನಿಯ' ಮೆರಗನ್ನು ಹೆಚ್ಚಿಸುತ್ತವೆ. ಅವೆಲ್ಲವೂ ಸೇರಿ ಶಬ್ದದ ಒಳಹೊರಗನ್ನು ಏಕಕಾಲಕ್ಕೆ ಹಿಡಿದು ಒಂದು ಅಖಂಡ ನುಡಿ ಶರೀರದ ಶ್ರೇಷ್ಠತೆಯನ್ನು ಎತ್ತಿ ಹೇಳುತ್ತವೆ. ಹೀಗೆ ಬಸವಣ್ಣ ಹಾಗೂ ಸರ್ವಜ್ಞ ನುಡಿಯನ್ನು ಹೇಳುವ ಪರಿ ನಿರ್ಮಲ ಮನಸ್ಸುಳ್ಳ ಸಹೃದಯನ ಅಂತರಂಗದ ಸತ್ಯವನ್ನು ಹೊರಹಾಕುತ್ತವೆ.

ಬಿದಿರಲಂದಣವಕ್ಕು, ಬಿದಿರಲ್ಲಿ ಸತ್ತಿಗೆಯಕ್ಕು,
ಬಿದಿರಲ್ಲೆ ಗುಡಿಯು ಗುಂಡಾರವಕ್ಕು,
ಬಿದಿರಲ್ಲಿ ಸಕಲ ಸಂಪದವೆಲ್ಲವು,
ಬಿದಿರದವರ ಮೆಚ್ಚ ನಮ್ಮ ಕೂಡಲಸಂಗಮದೇವ. (ಬ.ವ.೨೨೧)

ಬಿದಿರೆ ಅಂದಣವಕ್ಕು । ಬಿದಿರೆ ಸತ್ತಿಗೆಯಕ್ಕು ।
ಬಿದಿರಿಂದ ಸಕಲ ಪದವಕ್ಕು, ಲೋಕದೊಳು ।
ಬಿದಿರದವ ಕೆಟ್ಟ ಸರ್ವಜ್ಞ ॥೬೬೯॥

'ಬಿದಿರು' ಎಂಬ ಪದವನ್ನು ಬಿದುರು, ಡಂಬುಗಳು ಅಲ್ಲದೆ ಭಾಗು ಭೃತ್ಯವಾಗು ಎಂಬ ಕಿಂಕರಭಾವ ಈ ವಚನಗಳಲ್ಲಡಗಿದೆ. ಕಿಂಕರಭಾವದ ಸಂಕೇತವಾಗಿ ಬಳಸಿರುವ ಈರ್ವರ ವಚನಗಳನ್ನು ನಾನಾರ್ಥಗಳಲ್ಲಿ ಅರ್ಥೈಸಬಹುದು. ವಚನಗಳ ಸಂಯೋಜನೆಯಿಂದ ವಚನಗಳಲ್ಲಿರುವ ಅನುಭವಗಳನ್ನು ಕಾವ್ಯಾನುಭವವಾಗಿಸುವ ಶಬ್ದಪಾಕ ಅಥವಾ ಶಬ್ದಸಿದ್ಧಿ ಎದ್ದು ಕಾಣುತ್ತದೆ. ಬಿದಿರೆಂಬುದು ಈ ಲೋಕದ ಎಲ್ಲ ಸೌಂದರ್ಯಕ್ಕು ಅವಶ್ಯವೆಂಬುದನ್ನು ಈರ್ವರು ತಮ್ಮ ವಚನಗಳಲ್ಲಿ ಸಮಾನಾರ್ಥಗಳಲ್ಲಿ ಅರ್ಥೈಸಿರುವುದನ್ನು ಕಾಣಬಹುದು. ಕೇವಲ ವ್ಯವಹಾರದಲ್ಲಿ ಅಷ್ಟೇ ಅಲ್ಲ ದೃಷ್ಟಾಂತ, ಉಪಮೇಯ, ರೂಪಕಗಳಲ್ಲಿ ಅನುಭವ ಪೂರ್ಣವಾದ ವಚನಗಳು ಸಾಮ್ಯವಿರುವುದನ್ನು ಗಮನಿಸಬಹುದು. ವಚನಗಳಲ್ಲಿ ವ್ಯಕ್ತವಾಗುವ ಸಾಂಕೇತಿಕ ಅನುಭವ ಆ ಸಂಕೇತಗಳ ಭಾಷೆ ಒಂದೇ ರೀತಿಯಾಗಿ ಶಬ್ದಗಳು ಸಂಯೋಜನೆಗೊಂಡು ಕಾವ್ಯದ ಸಾಮಗ್ರಿಗಳಾಗಿ ಕಾವ್ಯ ನಿರ್ಮಾಣವಾಗುವುದನ್ನು ಕಾಣುತ್ತೇವೆ. ಯತಿ, ಲಯ, ಪ್ರಾಸ ಇತ್ಯಾದಿಗಳಲ್ಲಿ ವೈಶಿಷ್ಟ್ಯಪೂರ್ಣವಾದ ಕಾವ್ಯದ ಭಾಷೆಯಲ್ಲಿ ಪ್ರತಿ ಶಬ್ದಗಳು ಸಹ ಪ್ರಾಧಾನ್ಯತೆ, ಅರ್ಥಪೂರ್ಣತೆ ಹೊಂದಿರುವುದನ್ನು ಗುರುತಿಸಲಾಗಿದೆ.

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ,
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ!
ಮಾಡುವ ನೀಡುವ ನಿಜಗುಣವುಳ್ಳಡೆ
ಕೂಡಿಕೊಂಬ ನಮ್ಮ ಕೂಡಲಸಂಗಮದೇವ! (ಬ.ವ.೨೩೩)

ಕೊಟ್ಟು ಕುದಿಯಲಿ ಬೇಡ । ಕೊಟ್ಟಾಡಿ ಕೊಳಬೇಡ ।
ಕೊಟ್ಟು ನಾ ಕೆಟ್ಟೆ ನೆನಬೇಡ । ಶಿವನಲ್ಲಿ ।
ಕಟ್ಟಿಹುದು ಬುತ್ತಿ ! ಸರ್ವಜ್ಞ ॥೬೧೮॥

ದಾರ್ಶನಿಕರಾದ ಬಸವಣ್ಣ ಹಾಗೂ ಸರ್ವಜ್ಞ ತಮ್ಮ ವಚನಗಳಲ್ಲಿ ಕಾವ್ಯಶಕ್ತಿಗಳ ಜೊತೆಗೆ ಸುಂದರ ಪ್ರತಿಮಾ ನಿರ್ಮಾಣವನ್ನು ಪಡೆಮೂಡಿಸುತ್ತಾರೆ. ಸಹಜವಾಗಿಯೆ ದಾನದ ಪರಿಕಲ್ಪನೆಯಲ್ಲಿರುವ ಇವರೀರ್ವರ ವಚನಗಳು ದಾನದ ಮಹಿಮೆಯನ್ನು ಎತ್ತಿ ಹೇಳುತ್ತವೆ. ಕೆಲವರು ಯಾರದೋ ಒತ್ತಡಕ್ಕೆ ಮಣಿದು ದಾನ ಮಾಡಲು ಮುಂದೆ ಬರುತ್ತಾರೆ. ತಮ್ಮ ವಯಕ್ತಿಕ ಪ್ರಚಾರಕ್ಕಾಗಿ ದಾನಮಾಡಿದ ಮೇಲೆ ಮನಸ್ಸಿನಲ್ಲಿ ಸಂಕಟದ ವೇದನೆಯನ್ನು ಅನುಭವಿಸುತ್ತಾರೆ. ಮನಸ್ಸಿನಲ್ಲಿಯೇ ಕಸಿವಿಸಿ ಮಾಡಿಕೊಂಡು ನನ್ನ ಸಂಪತ್ತು ಹಾಳಾಯಿತೆಂದು ಮರುಗುತ್ತಾರೆ. ಇದಕ್ಕೆ ಬಸವಣ್ಣನವರ 'ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ, ನೀಡಿ ಕೆಟ್ಟರು ನಿಜವಿಲ್ಲದೆ' ಸರ್ವಜ್ಞನ 'ಕೊಟ್ಟು ಕುದಿಯಲಿ ಬೇಡ, ಕೊಟ್ಟಾಡಿ ಕೊಳಬೇಡ' ಈ ಎರಡು ವಚನಗಳು ಒಂದೇ ರೀತಿಯ ಅರ್ಥವನ್ನು ಧ್ವನಿಸುತ್ತವೆ. ಇಲ್ಲಿ ನಾವು ಗಮನಿಸಬೇಕಾಗಿದ್ದು ಪ್ರತಿಯೊಂದು ವಿಚಾರದಲ್ಲಿಯೂ ಸರ್ವಜ್ಞ ಹಾಗೂ ಬಸವಣ್ಣ ನೀತಿ ಪ್ರಧಾನವಾದ ವಿಚಾರಗಳನ್ನು ಹೇಳುವಲ್ಲಿ ಏಕತೆ ಸಾಧಿಸಿರುವುದನ್ನು ಈರ್ವರ ವಚನಗಳೊಂದಿಗೆ ತೌಲನಿಕವಾಗಿ ಗುರುತಿಸಲಾಗಿದೆ.

ಸರ್ವಜ್ಞನ ಮೇಲೆ ಪರಮಾವಧಿ ಪ್ರಭಾವವನ್ನು ಬೀರಿದವರೆಂದರೆ ಬಸವಣ್ಣನವರು. ಅವರ ಭಾವಗಳು, ಅವರ ವಚನಗಳು, ಅವರ ಲಯಗಳು ಸರ್ವಜ್ಞನ ಇಡೀ ವಚನಗಳಲ್ಲಿ ಚೆಲ್ಲುವರಿದಿವೆ. ಹೀಗೆ ಒಂದು ದೃಷ್ಟಿಯಿಂದ ಸರ್ವಜ್ಞನೇ ವಚನಕಾರರ ನಿಜವಾದ ಉತ್ತರಾಧಿಕಾರಿ. ವಚನಕಾರರಾದ ಮೇಲೆ ೩೦೦ ವರ್ಷಗಳ ನಂತರ ಬದುಕಿದವನು ಸರ್ವಜ್ಞ, ವಚನಕಾರರು ಪಳಗಿಸಿದ ಕನ್ನಡ ಭಾಷೆಯನ್ನು ಸಮರ್ಥವಾದ ರೀತಿಯಲ್ಲಿ ಬಳಸಿಕೊಂಡ ಸರ್ವಜ್ಞ ವಚನಕಾರರ ನಿಜವಾದ ಉತ್ತರಾಧಿಕಾರಿಯೆನಿಸಿಕೊಳ್ಳುತ್ತಾನೆ.

ಸರ್ವಜ್ಞ–ಬಸವಣ್ಣನವರ ವೈಚಾರಿಕತೆಯ ದೃಷ್ಟಿಯನ್ನು ಅವಲೋಕಿಸಿದಾಗ ಈರ್ವರಲ್ಲಿಯೂ ಇರುವ ಸಾಮಾಜಿಕ ಹಾಗೂ ವಿಶ್ವಮಾನವ ದೃಷ್ಟಿ, ಹೆಚ್ಚಾಗಿ ಸಾಮ್ಯವಾಗಿರುವುದನ್ನು ಕಾಣಬಹುದು. ಗುರು, ಲಿಂಗ, ಜಂಗಮ ದೈವತ್ವದ ಕಲ್ಪನೆ, ಈರ್ವರ ವಚನಗಳಲ್ಲಿ ಅರ್ಥವ್ಯಾಪ್ತಿ, ಭಾವವ್ಯಾಪ್ತಿ ಅನನ್ಯ ಹಾಗೂ ಅನುಪಮ. ಅನ್ಯ ದೇವರನ್ನು ಅರ್ಚಿಸುವುದು ಅನುಚಿತ. ಪರಮ ಪತಿವ್ರತೆಗೆ ಗಂಡನೊಬ್ಬನೇ, ಜಾತೀಯತೆಯನ್ನು ತ್ಯಜಿಸಿ ಭ್ರಾಂತಿಯನ್ನು ಬಿಟ್ಟು ಆತ್ಮದ ನೆಲೆಯನ್ನು ಅರಿತು ಜಗದ ಕಲ್ಯಾಣ ಬಯಸುವ ಪೂಜ್ಯ ಜೀವಿಯೇ ಜಂಗಮನೆನಿಸಿಕೊಳ್ಳುತ್ತಾನೆ ಎಂಬ ಭಾವ ವ್ಯಕ್ತವಾಗಿರುದನ್ನು ಕಾಣಬಹುದು. ಸಜ್ಜನರ ಸಹವಾಸ, ದುರ್ಜನರ ಸಂಗ, ಕುರಿತು ಪ್ರಧಾನವಾಗಿ ಅಂದಿನ ಸಮಾಜದ ಮೂಢನಂಬಿಕೆ, ಕಂದಾಚಾರ, ಜಾತಿ ಪದ್ಧತಿ, ಹೊಲೆಯನಾರು, ಮೇಲ್ವರ್ಗ, ಕೆಳವರ್ಗದ ಕಲ್ಪನೆ, ಸಕಲ ಪ್ರಾಣಿಗಳಲ್ಲಿ ದಯೆ ಹಾಗೂ ಸಮಾಜ ಪರಿವರ್ತನೆಯಲ್ಲಿ ಸಮಾನ ವೈಚಾರಿಕತೆಯಲ್ಲಿ ತೊಡಗಿರುವದನ್ನು ತೌಲನಿಕ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

## ಸರ್ವಜ್ಞ ಹಾಗೂ ಆಂಡಯ್ಯ:

‘ಆಂಡಯ್ಯ ವಿಮರ್ಶಕರ ಕೈಯಲ್ಲಿ ಬಹು ಚರ್ಚಿತನಾದ ಕವಿಯಾಗಿದ್ದಾನೆ. ಅವನ ಹೆಸರು, ಮತ, ವಂಶ, ಕಾಲ ಅವನಿಗೆ ಆಶ್ರಯ ಕೊಟ್ಟಿರಬಹುದಾದ ರಾಜ, ಅವನು ಉಪಯೋಗಿಸಿದ ಕಾವ್ಯ ಭಾಷೆ ಮತ್ತು ಅವನ ಕಾವ್ಯ ವಸ್ತು ಇವುಗಳ ಬಗ್ಗೆ ಪಂಡಿತರು ನಡೆಸಿದ ಚರ್ಚೆಗಳಿಗೆ ಕೊನೆಯಿಲ್ಲ.’ ಆಂಡಯ್ಯ ೧೩ ನೆಯ ಶತಮಾನದಲ್ಲಿ ಬಂದ ಜೈನ ಕವಿ ಎಂಬುದನ್ನು ಅವನ “ಕಬ್ಬಿಗರ ಕಾವಂ” ಎಸ್.ಜಿ.ನರಸಿಂಹಾಚಾರ ರವರು ಮತ್ತು ಎ.ಎಂ.ರಾಮಾನುಜಯ್ಯಂಗಾರ ಇವರು ಸಂಪಾದಿಸಿದ ಗ್ರಂಥದಲ್ಲಿ ಆಂಡಯ್ಯನ ಜೀವನ ವೃತ್ತಾಂತವನ್ನು ಬಹಳಷ್ಟು ವಿಸ್ತೃತವಾಗಿ ರಚಿಸಿದ್ದಾರೆ. ೧೯೬೪ ರಲ್ಲಿ ದೇಜಗೌ ರವರು ಆಂಡಯ್ಯನವರ ಜೀವನ ವೃತ್ತಾಂತವನ್ನು ಮತ್ತು ಕಾವ್ಯ ವಿವರಗಳನ್ನು ವಿಸ್ತಾರವಾಗಿ ಚರ್ಚಿಸಿ ಆಂಡಯ್ಯ ಸರ್ವಜ್ಞನಂತೆ ಅಧ್ಯಾತ್ಮಿಯಲ್ಲವಾಗಿರಬಹುದು ಆದರೂ ಕವಿಯೇ ಅಧ್ಯಾತ್ಮಿಯಾದ ಸರ್ವಜ್ಞನಿಗೆ ಕಾವ್ಯ ಸೃಷ್ಟಿಯಲ್ಲಿ ಮಿತಿಗಳೇನಿಲ್ಲ.

ಆತನ ಉಪನಿಷತ್ ಮಾದರಿಯ ವಾಕ್ಯಗಳಿಗೆ ಜೀವನವೇ ವಸ್ತು. ಅಲ್ಲದೇ ಆತ ನಂಬಿದ ದೈವಕ್ಕೆ ನಿರ್ದಿಷ್ಟ ಸ್ವರೂಪವಿಲ್ಲ. ವರ್ಗ ಮತ್ತು ಮತವು ಇಲ್ಲ. ಅದು ಅಲ್ಲಮ ಕಂಡ ಗುಹೇಶ್ವರನಂತೆ ನಿರಾಕಾರ ಮತ್ತು ವಿಶ್ವಚೈತನ್ಯ ಶಕ್ತಿ! ಆದರೆ ಜೈನ ಮತಾವಲಂಬಿಯಾದ ಆಂಡಯ್ಯನಿಗೆ ಅನೇಕ ಮಿತಿಗಳಿವೆ. ಅದರಲ್ಲಿ ಮೊದಲನೆಯದು, ಆತ ನಂಬಿದ ಧರ್ಮ. ಎರಡನೆಯದು ಆತನ ಕಾವ್ಯರಚನಾ ಮಾದರಿ. ಅಂದರೆ ಕಾವ್ಯಕ್ಕೆ ನಿಗಧಿತವೆನಿಸುವ ವರ್ಣನೆಗಳಲ್ಲಿ ತಲ್ಲೀನವಾಗುವುದು. ಬದುಕಿನ ಸಮಸ್ಯೆಗಳು ಮತ್ತು ಅವನ್ನು ನೀಗಲು ಮಾಡಬಹುದಾದ ಪ್ರಯತ್ನಗಳು ಆಂಡಯ್ಯನಿಗೆ ಮುಖ್ಯವಲ್ಲ. ಏಕೆಂದರೆ ಆಂಡಯ್ಯ ತನ್ನ ಬದುಕನ್ನು ಕಳೆದದ್ದು ರಾಜನ ಆಶ್ರಯದಲ್ಲಿ. ಈ ಮಾತನ್ನು ದೇಜಗೌ ಅವರು ತಮ್ಮ ಕಬ್ಬಿಗರ ಕಾವಂ ಸಂಪಾದಿತ ಗ್ರಂಥಗಳಲ್ಲಿ ಸ್ಪಷ್ಟಪಡಿಸಿರುತ್ತಾರೆ. ಅಲ್ಲದೆ ಆಂಡಯ್ಯನ ಅನೇಕ ಪದ್ಯಗಳನ್ನು ಉದ್ಧರಿಸಿ, ಆ ಪದ್ಯಗಳನ್ನೆಲ್ಲ ವಿಶ್ಲೇಷಿಸುತ್ತ ಆಂಡಯ್ಯ ಯಾವ ವಂಶದ ರಾಜನನ್ನು ತನ್ನ ಆಶ್ರಯದಾತನೆಂದು ಸ್ವೀಕರಿಸಿ ಸ್ತುತಿಸಿರುತ್ತಾನೆಂದು ಚರ್ಚಿಸಿರುತ್ತಾರೆ. ಹಾಗೆ ಆಂಡಯ್ಯ ತನ್ನ ಆಶ್ರಯದಾತನೆಂದು ಗುರುತಿಸಿಕೊಂಡಿರುವ ಕದಂಬರ ಕಾಮದೇವನೆಂಬುವನ ಕಂದಾವಳಿಯನ್ನು ಕೃತಿಯ ಕೊನೆಯಲ್ಲಿ ಕಾಣಿಸಿರುತ್ತಾರೆ. ‘ಈ ಕಾಮದೇವ ಹಾನುಗಲ್ಲು ಕದಂಬರ ವಂಶದಲ್ಲಿ ಬರುವ ಹದಿನೆಂಟನೆಯ ಅರಸು. ಆತನ ಕಾಲ ೧೨೬೦ರಿಂದ ೧೩೧೫ ಎಂದು ನಿಗಧಿಪಡಿಸಿರುತ್ತಾರೆ. ಆದರೆ ಆಂಡಯ್ಯ ವಚನಕಾರರ ಚಳವಳಿಯ ನಂತರ ಬಂದ ಕವಿ.’

‘ಆಂಡಯ್ಯನ ಕಾವ್ಯೋದ್ದೇಶದ ಬಗ್ಗೆ ಇನ್ನೊಂದು ಮಾತನ್ನು ಹೇಳಬಹುದು. ಆಂಡಯ್ಯನದೇ ಆದ ಸ್ವತಂತ್ರ ಕಾವ್ಯಮಾರ್ಗ ಮುಂದಿನ ಕವಿಗಳಿಗಾಗಿ ಹುಟ್ಟಿಬರಲಿಲ್ಲ ಎಂಬ ಅಭಿಪ್ರಾಯವೊಂದಿದೆ. ಆಂಡಯ್ಯನ ಬಗ್ಗೆ ವಿಚಾರ ಮಾಡಿದಾಗ ಈ ಮಾತನ್ನು ಒಪ್ಪಬಹುದಾಗಿದೆ. ಆದರೆ ಭಾಷೆಯ ಒಡಲಲ್ಲೇ ನಡೆದಿದ್ದ ಪರಿವರ್ತನೆಯ ಆಸೆಗೆ ಆಂಡಯ್ಯ ಒಂದು ಲಕ್ಷಣವಾಗಿದ್ದಾನೆಂದು ತೋರುತ್ತದೆ. ಆಂಡಯ್ಯನಿಗಿಂತ ಮೊದಲೇ ವಚನಕಾರರು ಭಾಷೆಯ ಸೂತಕದಿಂದ ಪಾರಾಗಲು ಹವಣಿಸಿ ಅದರಲ್ಲಿ ತಕ್ಕ ಮಟ್ಟಿನ ಯಶಸ್ಸನ್ನೂ ಪಡೆದರು. ಆಂಡಯ್ಯನದು ಇನ್ನೊಂದು ರೀತಿಯ ಪ್ರಯತ್ನವಾಗಿದೆ. ಸಂಸ್ಕೃತವನ್ನು ತದ್ಭವಗೊಳಿಸಿ, ತದ್ಭವ ಸ್ವತಂತ್ರವಾದ ಶಬ್ದವಾದರೆ ಬೇಕಾದ ಅರ್ಥವನ್ನು

ನಿರ್ದೇಶಿಸಲು ಅದನ್ನು ಉಪಯೋಗಿಸಬಹುದು. ಕನ್ನಡ ಸ್ವತಂತ್ರವಾದ ಅರ್ಥವಾಹಕತ್ವವನ್ನು ಪಡೆಯುವ ದಿಕ್ಕಿನಲ್ಲಿ ಇದೂ ಒಂದು ಮಹತ್ವದ ಪ್ರಯತ್ನವಾಗಿದೆ.'

ಆಂಡಯ್ಯ ತನ್ನ ಹಿಂದಿನ ಕಾಲದ ಮೆಚ್ಚಿನ ಕವಿಗಳನ್ನಿಲ್ಲಿ ನೆನೆಯುತ್ತ ತಂದೆ, ತಾಯಿಗಳ ಹೆಸರನ್ನು ಹೇಳುತ್ತಾನೆ. ಅಧ್ಯಾತ್ಮಿಯಾದ ಸರ್ವಜ್ಞ ತಂದೆ, ತಾಯಿಯರ ಹೆಸರು ಹೇಳುತ್ತಲೇ ಅವರು ನನ್ನ ಮಾತಾ ಪಿತೃಗಳಲ್ಲ ಎಂದು ತಿರಸ್ಕರಿಸುತ್ತಾನೆ. ಈ ನೆಲೆಯಲ್ಲಿ ಕರ್ನಾಟಕ ಇತಿಹಾಸದಲ್ಲಿ ಬಂದ ಎಲ್ಲ ಸಂತರೂ ತಮ್ಮ ಗುಟ್ಟನ್ನು ಮುಖ್ಯವೆಂದು ಪರಿಗಣಿಸುವುದೇ ಇಲ್ಲ, ಹಾಗೆಯೆ ಸಾವನ್ನು ಕೂಡ. ಹುಟ್ಟು ಸಾವು ಜನಸಾಮಾನ್ಯರಿಗೆ ಸಹಜವಾಗಿರುವಂತೆಯೆ ಸಂತರಿಗೂ ಅತ್ಯಂತ ಸಹಜವಾಗಿ ಕಾಣುತ್ತದೆ. ಆದರೆ ರಾಜ್ಯವಿಸ್ತಾರ ಕೈಗೊಳ್ಳುವ ರಾಜ ಮಹರಾಜರಿಗೆ, ಸಮರ ವೀರರಿಗೆ ಸಾವು ಮತ್ತು ಸಾವಿನ ಸಂದರ್ಭ ಅದರ ನಿಗಧಿತ ಮೂಹೂರ್ತ ಮಹತ್ವವಾಗಿ ಗೋಚರವಾಗುತ್ತದೆ. ಆದರೆ ಲೋಕಕಲ್ಯಾಣವನ್ನು ಬಯಸುವ ಸಂತರಿಗೆ ಬದುಕನ್ನು ಪ್ರೀತಿಸುವ ಜನಪದರಿಗೆ ಬದುಕೇ ಅತ್ಯಂತ ಮಹತ್ವವೆನಿಸುತ್ತದೆ. ಹೀಗಾಗಿ ಕರ್ನಾಟಕದಲ್ಲಿ ೧೨ನೆಯ ಶತಮಾನದಲ್ಲಿ ಬಂದ ವಚನಕಾರರು ಮತ್ತು ಸರ್ವಜ್ಞನ್ನೊಳಗೊಂಡಂತೆ ಎಲ್ಲ ಸಂತರೂ ಬದುಕನ್ನು ಕುರಿತೇ ವ್ಯಾಖ್ಯಾನಕ್ಕೆ ಒಳಪಡಿಸುತ್ತಾರೆ.

ಜನಸಾಮಾನ್ಯರಿಗೆ ಮಾರ್ಗದರ್ಶಕರಾಗಿ ದಾರಿದೀಪವಾಗುತ್ತಾರೆ. ಪಂಪನಿಂದ ಮೊದಲುಗೊಂಡು ಆಂಡಯ್ಯನವರೆಗೆ ಇಂತಹ ವಿವರಗಳು ಅವರವರ ಕಾವ್ಯದಲ್ಲಿ ಪ್ರಸ್ತಾಪವಾಗುವುದನ್ನು ಕಾಣುತ್ತೇವೆ. ಅವರೆಲ್ಲರನ್ನು ತುಲನಾತ್ಮಕವಾಗಿ ನೋಡಿದಾಗ ಸಂಸ್ಕೃತವನ್ನು ಬೆರೆಸದೇ ಕಾವ್ಯವನ್ನು ರಚಿಸುವುದಾದರೆ ಅದು ಆಂಡಯ್ಯನಿಂದ ಮಾತ್ರ ಸಾಧ್ಯ. ಆಂಡಯ್ಯ ತನ್ನ 'ಕಬ್ಬಿಗರ ಕಾವ' ಕೃತಿಯಲ್ಲಿ ಪ್ರಕೃತಿ ಪ್ರೇಮಕ್ಕಾಗಿ ಮತ್ತು ನಾಡು ನುಡಿಯ ಪ್ರೀತಿಗಾಗಿ ಆತನ ಕಬ್ಬಿಗರ ಕಾವದ ಕಥೆ ಕೃತಕ ವಿವರಗಳಿಂದ ಕೂಡಿದ್ದರೂ ಕರ್ನಾಟಕವನ್ನು ಅಂತರಂಗಪೂರ್ವಕವಾಗಿ ವರ್ಣಿಸಿರುವುದು ಮಾತ್ರ ಅಪೂರ್ವವಾಗಿದೆ. ಸಂತನಾದ ಸರ್ವಜ್ಞ ಮನುಷ್ಯರ ಅಂತರಂಗದ ಮತ್ತು ಅಧ್ಯಾತ್ಮದ ಬಗ್ಗೆ ಆಸಕ್ತಿ ವಹಿಸುತ್ತಾ ಅವರ ಆತ್ಮೋನ್ನತಿಯನ್ನು ಬಯಸಿದವನಾಗಿ ಕನ್ನಡ ಸಾಂಸ್ಕೃತಿಕ ಪರಂಪರೆಯಲ್ಲಿ ಕಂಡುಬರುವ ಜನಪ್ರಿಯತೆಯ ಶ್ರೇಷ್ಠ ಸಂತ. ಸರ್ವಜ್ಞ ತನ್ನ ತ್ರಿಪದಿಗಳಲ್ಲಿ ಪರಂಪರಾಗತ ನಂಬಿಕೆಗಳನ್ನು ಭಂಜಿಸುತ್ತ ನಡೆಯುತ್ತಾನೆ. ಸರ್ವಜ್ಞ ಬದುಕಿಗೆ ಸೀಮಿತವೆನಿಸುವ ಮನೆಯ ಕಲ್ಪನೆಯನ್ನು ಮೊದಲು ಭೇದಿಸುತ್ತಾನೆ.

ಕರದಿ ಕಪ್ಪರ ಉಂಟು । ಹಿರಿದಪ್ಪನಾಡುಂಟು ।
ಹರನೆಂಬ ದೈವ ನಮಗುಂಟು
ನಮ್ಮಿಂದ ಸಿರಿವಂತರಾರು **ಸರ್ವಜ್ಞ**

ಎಂದು ಅಲೆಮಾರಿತನದ ಸಿರಿವಂತಿಕೆಯನ್ನು ಸರ್ವಜ್ಞ ಎಲ್ಲಕ್ಕಿಂತ ಮೊದಲು ತನ್ನ ನೆಲೆ ಎಲ್ಲೆಂಬುದನ್ನು ಸ್ಪಷ್ಟಪಡಿಸುತ್ತಾನೆ. ಸರ್ವಸಂಗ ಪರಿತ್ಯಾಗಿಗಳಾದ ಅಂತರಂಗದ ಶ್ರೀಮಂತಿಕೆ ಈ ರೀತಿಯಾಗಿರುತ್ತದೆ. ಹೊರನೋಟಕ್ಕೆ ಬಡವರಾಗಿ ಕಂಡರು ಲೋಕಕಲ್ಯಾಣದಲ್ಲಿಯೇ ಸುಖವಿದೆ ಎಂದು ವಿಹರಿಸುತ್ತಾರೆ. ಬಹುಶಃ ಜಂಗಮ ಸ್ಥಿತಿಯನ್ನೇ ನಿರಂತರವಾಗಿ ಒಪ್ಪಿಕೊಂಡ ಸಂತರು ಸ್ಥಾವರ ಬದುಕಿನ ಲೌಕಿಕ ಭೋಗವನ್ನು ತಳ್ಳಿಹಾಕಿರುವಂತಿದೆ. ಆದರೆ ಅವರ ಜಂಗಮ ಸ್ಥಿತಿ ಅವರ ಸಾಧಕ ಬದುಕಿನ ಪರಮಾರ್ಥವನ್ನು ಸೂಚಿಸುತ್ತದೆ. ಸಾಧಕ ಜೀವನದಲ್ಲಿ ಅವರ ಪ್ರಯಾಣ

ಬದುಕಿನ ಕ್ರಿಯೆಯಾಗಿ ಕಂಡು, ತನ್ನ ಅಲೆಮಾರಿ ಜೀವನದ ಮೂಲಕ ಅರ್ಜಿಸಿದ ಶ್ರೀಮಂತಿಕೆಯನ್ನು 'ತಿರಿವಂತರಿಂ ಸಿರಿವಂತರಾರು' ಎಂದು ಹೇಳುತ್ತಾನೆ.

## ಸರ್ವಜ್ಞ ಹಾಗೂ ಕಬೀರರು:

'ಸರ್ವಜ್ಞ ಕನ್ನಡ ನಾಡಿನ ಕ್ರಾಂತಿಕಾರಿ ವಿಚಾರಧಾರೆಯ, ಸ್ವತಂತ್ರ ಮನೋವೃತ್ತಿಯ ನಿರ್ಭೀತನಾದ ಜನಕವಿ. ಮಹಾತ್ಮ ಕಬೀರದಾಸ ಹಿಂದಿ ಸಾಹಿತ್ಯ ಲೋಕದಲ್ಲಿ ಮಾತ್ರವಲ್ಲ ತನ್ನ ಸಮಕಾಲೀನ ಜೀವನದಲ್ಲಿಯೇ ಹೊಸ ಮನ್ವಂತರ ತಂದ ಹಾಗೂ ಹೊಸ ಮೌಲ್ಯಗಳನ್ನು ಸ್ಥಾಪಿಸಿದ ಮಹಾನುಭಾವ.' ಉತ್ತರ ದೇಶದ ಮಹಾತ್ಮ ಕಬೀರನ ಜೀವನಕ್ಕೂ ಕನ್ನಡ ದೇಶದ ಸರ್ವಜ್ಞನ ಜೀವನಕ್ಕೂ ಸಾಕಷ್ಟು ಸಾಮ್ಯಗಳನ್ನು ಕಾಣಬಹುದಾಗಿದೆ. ಸರ್ವಜ್ಞನ ಜನನ ತಂದೆ ತಾಯಿ ಬಗೆಗೆ ಇರುವ ವಿವಾದ ಕಬೀರನ ಬಗ್ಗೆಯೂ ಇದೆ. ಈಗಾಗಲೇ ಸರ್ವಜ್ಞನ ಜೀವನ ಕುರಿತು ಚರ್ಚಿಸಿದ ಅಬ್ಬಲೂರ ಐತಿಹಾಸಿಕ ಸ್ಥಳ. 'ಪ್ರಾಚೀನ ಕಾಲದ ಜೈನರಿಗೂ ಶೈವರಿಗೂ ಪವಿತ್ರ ಕ್ಷೇತ್ರವಾಗಿತ್ತು. ಅಚರಾಜ– ಮಲ್ಲಿದೇವ ಎಂಬ ಕವಿಗಳು ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಬರೆದ ಶಾಸನವೊಂದರಿಂದ ಅಬ್ಬಲೂರು ಬಸವಣ್ಣನ ಸಮಕಾಲೀನನಾದ ಏಕಾಂತರಾಮಯ್ಯ ಈ ಪ್ರದೇಶದಲ್ಲಿ ಧಾರ್ಮಿಕ ಕ್ರಾಂತಿಯನ್ನುಂಟುಮಾಡಿ ಹೊಸ ಬದುಕಿಗೆ ನಾಂದಿ ಹಾಡಿದನೆಂಬುದು ಐತಿಹಾಸಿಕ ಸತ್ಯ.' ಸರ್ವಜ್ಞ ಇಂಥ ಮಹತ್ವದ ಪ್ರದೇಶದಲ್ಲಿ ಜನ್ಮ ಪಡೆದನೆಂದ ಮೇಲೆ ಕ್ರಾಂತಿಕಾರಿಯಾಗದೆ ಇರಲು ಹೇಗೆ ಸಾಧ್ಯ? ಅಂತೆಯೆ ಆತ ಕಬೀರನ ಹಾಗೆಯೇ ಶುಷ್ಕಬಾಹ್ಯಾಚಾರ, ಕುಲಪ್ರತಿಷ್ಠೆ ಆಡಂಬರ, ಮೇಲು ಕೀಳು ಮುಂತಾದವುಗಳನ್ನು ನಿರ್ಭಿಡೆಯಿಂದ ಖಂಡಿಸಿದ.

'ಕಬೀರದಾಸರು ೧೪೪೦–೧೫೧೮ ಭರತ ವರ್ಷದ ಉತ್ತರ ಭಾಗಗಳಲ್ಲಿ ಬಹಳವಾಗಿ ಪ್ರಚಾರಕ್ಕೆ ಬಂದ ಒಂದು ಧರ್ಮ ಪಂಥದ ಸ್ಥಾಪಕ. ಹುಟ್ಟಿದ್ದು ೧೩೯೮ ನೆಯ ಇಸ್ವಿಯ ಅಥವಾ ವಿಕ್ರಮ ಸಂವತ್ಸರ ೧೪೫೫ ರಲ್ಲಿ ವಾರಣಾಸಿಯಲ್ಲಿ.' 'ಮದುವೆ ದಿಬ್ಬಣ ಹಿಂತಿರುಗಿ ಬರುತ್ತಿತ್ತು. ವರನ ಹೆಸರು ನೀರೂ ಲಹರ್ತಾರಾ ಎಂಬ ಕುಂಟೆಯ ಬಳಿ ಬಂದಾಗ ಆತನ ಕಣ್ಣಿಗೆ ಒಂದು ಮಗು ಕಾಣಿಸಿತು. ಓಡಿ ಹೋಗಿ ನೋಡಿದ ಜೊಂಡಿನ ಮಧ್ಯದಲ್ಲಿ ಚಿಂದಿಯಲ್ಲಿ ಸುತ್ತಿಟ್ಟ ಮುದ್ದು ಹಸು ನಿದ್ರಿಸುತ್ತಿದೆ, ಅದನ್ನು ಎತ್ತಿ ತಂದು ಎಲ್ಲರಿಗೂ ತೋರಿಸಿದ. ದಯಾಳುವಾದ ಅವನು ಆ ಮಗುವನ್ನು ಸಾಕುವುದಕ್ಕೆ ತೊಡಗಿದ. ಅವನ ಹೆಂಡತಿ ನೀಮಾ ಗಂಡನ ಇಚ್ಛೆಯಂತೆ ಆ ಮಗುವನ್ನು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವಿನಂತೆ ಸಾಕಿದಳು. ಅವರು ಅದಕ್ಕೆ ಕಬೀರ ಎಂದು ಹೆಸರಿಟ್ಟರು. ಕಬೀರ್ ಎಂದರೆ ಅರಬ್ಬೀ ಭಾಷೆಯಲ್ಲಿ 'ಮಹಿಮಾನ್ವಿತ" ಎಂದು ಅರ್ಥ. ಬೆಳೆಯುವ ದಿನಗಳಲ್ಲಿ ಗೋಸಾಯಿ ಅಷ್ಟಾವಂದ್ ಎಂಬಾತನ ಪ್ರಭಾವದಿಂದ ಕಬೀರ ದೇವರನ್ನು ಹರಿ ಎಂದು ರಾಮಾ ಎಂದು ಕರೆದ.'

ಇದು ಕಬೀರನ ಜೀವನ ಕುರಿತಾದ ಒಂದು ಕಥೆ. ಇದರಲ್ಲಿ ನಂಬಲಾರದ ಅಂಶವೇನು ಇಲ್ಲ. ಆದರೆ ಇದು ಸತ್ಯ ಎನ್ನುವಷ್ಟು ಆಧಾರವೂ ಇಲ್ಲ. ಯಾರೂ ಹುಟ್ಟುವಾಗಲೇ ದೊಡ್ಡವರಾಗಿರುವುದಿಲ್ಲ, ದೊಡ್ಡವರಾಗಿ ಅವರು ಲೋಕಪ್ರಸಿದ್ಧಿಯನ್ನು ಪಡೆದ ಮೇಲೆ ಶ್ರದ್ಧಾಳುಗಳು ಸವಕಲು ಸಂಗತಿಗೆ ಮೆರಗು ಕೊಟ್ಟು ಹೇಳಲು ಹೊರಡುತ್ತಾರೆ.

ಅನೇಕ ಚಮತ್ಕಾರಗಳು ಸೇರಿ ಹೋಗುತ್ತವೆ. ಕಬೀರದಾಸರ ಹುಟ್ಟು, ಬೆಳವಣಿಗೆ ಹಾಗೂ ಜೀವನದ ಬಗ್ಗೆ ದಂತಕಥೆಗಳೇ ಆಧಾರ. ಕಬೀರನನ್ನು ಕುರಿತು ಅನೇಕ ಪವಾಡ ಕಥೆಗಳು ಹುಟ್ಟಿವೆ. ಧರ್ಮವನ್ನು ಕುರಿತು ವಾದಿಸಲು ಬಂದ ಅನೇಕರನ್ನು ಕಬೀರ ಸೋಲಿಸಿದ. ಅದಕ್ಕೂ ಹೆಚ್ಚಿನ ಸಂಗತಿ ಏನೆಂದರೆ ಇವನ ಹಗೆಗಳು ಇವನಿಗೆ ಒಡ್ಡಿದ ಪ್ರಲೋಭನ ವಿಷ ಪರೀಕ್ಷೆಗಳಲ್ಲಿ ಇವನು ಸೋಲದೆ ನಿಂತದ್ದು.

ಸರ್ವಜ್ಞ ಕುಂಬಾರ ವಿಧವೆ ಮಾಳಿ ಹಾಗೂ ಮಾದರಸ ಬ್ರಾಹ್ಮಣನ ಜಾತ ಸಂತತಿಯಾದರೆ, ಕಬೀರ ರಾಮಾನುಜರ ಆಶೀರ್ವಾದದಿಂದ ಜನಿಸಿದ ಜಾರ ಸಂತಾನ. ಲೋಕಾಪವಾದಕ್ಕೆ ಹೆದರಿ ಕಬೀರನ ಮಾತೆ ಅವನನ್ನು ಕೆರೆಗೆ ಎಸೆದಳು. ಸರ್ವಜ್ಞ ಈ ದೃಷ್ಟಿಯಲ್ಲಿ ಪುಣ್ಯವಂತನಿರಬೇಕು ಏಕೆಂದರೆ ಆತನೂ ಕೂಡ ವಿಧವೆಯ ಮಗನಾದರೂ ಕೆರೆಯ ಪಾಲಾಗಲಿಲ್ಲ. 'ಇವರಿಬ್ಬರ ಪಾಲಿಗೆ ಜ್ಞಾನದ ಎಲ್ಲ ದ್ವಾರಗಳು ಮುಚ್ಚಿದ್ದವು. ಹೀಗಾಗಿ ಇಬ್ಬರೂ ಓರೋರ್ವರಲ್ಲಿ ಒಂದೊಂದು ನುಡಿ ಕಲಿತು ವಿದ್ಯೆಯ ಪರ್ವತವೇ ಆದರು. ಕಬೀರ ಪವೃತ್ತಿ ನಿವೃತ್ತಿಗಳ ನಡುವೆ ಸಮನ್ವಯ ಸ್ಥಾಪಿಸಿದ ಗೃಹಸ್ಥ. ಸರ್ವಜ್ಞ ಗೃಹಸ್ಥ ಜೀವನದ ಬಗ್ಗೆ ಏನೂ ತಿಳಿಯದವ. ವೃತ್ತಿಯಿಂದ ಸರ್ವಜ್ಞ ಕುಂಬಕಾರನಾದರೆ, ಕಬೀರ ನೇಯ್ಗೆಕಾರ ಇಬ್ಬರಲ್ಲೂ ಕಾಯಕದ ರೂಪಕ  ವಿಲಾಸ ಕಂಡು ಬರುತ್ತದೆ. ಇಬ್ಬರೂ ಸಮಾಜದ ಅನೀತಿ, ಅನ್ಯಾಯ ಡಂಭಾಚಾರಗಳ ವಿರುದ್ಧ ಸಿಡಿದೆದ್ದ ಕ್ರಾಂತಿಕಾರರು.' 'ಕಬೀರರಿಗೆ ಲೋಇ ಎಂಬ ಹೆಸರಿನ ಹೆಂಡತಿ, ಕಮಾಲ ಎಂಬ ಹೆಸರಿನ ಮಗ ಮತ್ತು ಕಮಾಲಿ ಎಂಬ ಹೆಸರಿನ ಮಗಳಿದ್ದಳು ಎಂದು ಪ್ರತೀತಿ.' 'ಸ್ವಾಮಿ ಇಷ್ಟು ಕೊಡು ಸಾಕು ನನ್ನ ಪರಿವಾರದ ಪೋಷಣೆಯಾಗಲಿ. ನಾನು ಹಸಿದಿರಬಾರದು, ಮನೆಗೆ ಬಂದ ಸಾಧುಗಳಿಗೆ ಅನ್ನ ನೀಡುವಷ್ಟು ಇರಬೇಕು." ಇಷ್ಟು ಭಿಕ್ಷೆ ಬೇಡಕೂಡದೆಂದು ಹೇಳಿದ್ದಾರೆ. ಸತ್ತರೂ ಚಿಂತೆ ಇಲ್ಲ, ದೇಹಕ್ಕಾಗಿ ಬೇಡುವುದಿಲ್ಲ. ಅನ್ಯರ ಹಿತಕ್ಕಾಗಿ ಬೇಡುವುದಾದರೆ ನನಗೇನು ನಾಚಿಕೆ ಇಲ್ಲ. ಎಂಬ ಅವರ ಮಾತನ್ನು ಗಮನಿಸಿದಾಗ ಅವರು ಹೇಗೆ ಸಂಸಾರ ಮಾಡಿದರು ಎಂದು ಅರ್ಥವಾಗುವುದಕ್ಕೆ ಕಬೀರರು ಗೃಹಸ್ಥ ಜೀವನವನ್ನು ನೆಡೆಸುತ್ತಿದ್ದರು ಎಂಬುದಕ್ಕೆ ಅವರ ಈ ಮಾತು ಅವರ ಗೃಹಸ್ಥರು ಎಂಬುದನ್ನು ಸಾಕ್ಷೀಕರಿಸುತ್ತದೆ.' 'ಕಬೀರರಿಗೆ ಓದಲು, ಬರೆಯಲು ತಿಳಿದಿರಲಿಲ್ಲ. ಮಸಿ, ಕಾಗದವನ್ನು ಮುಟ್ಟಲಿಲ್ಲ. ಲೆಕ್ಕಣಿಕೆಯನ್ನು ಕೈ ಹಿಡಿಯಲಿಲ್ಲ ಎಂದು ಅವರ ಒಂದು ದ್ವಿಪದಿಯಲ್ಲಿ ತಮ್ಮ ಬಗ್ಗೆ ಹೇಳಿಕೊಂಡಿದ್ದಾರೆ.' ಕಬೀರರಿಗೆ ವೈಷ್ಣವ ಸಂತ ಆಚಾರ್ಯ ರಾಮಾನಂದರನ್ನು ಗುರುಗಳನ್ನಾಗಿ ಸ್ವೀಕರಿಸುವ ಇಚ್ಛೆಯಾಯಿತು. ಆದರೆ ರಾಮಾನಂದರು ಕಬೀರರನ್ನು ಶಿಷ್ಯರನ್ನಾಗಿ ಸ್ವೀಕರಿಸಲು ನಿರಾಕರಿಸಿದರು. ಕಬೀರರು ನಿರಾಶರಾಗಲಿಲ್ಲ. ಬೆಳಗ್ಗೆ ನಾಲ್ಕು ಗಂಟೆಗೆ ಸ್ವಾಮಿ ರಾಮಾನಂದರು ಸ್ನಾನಕ್ಕೆಂದು ಗಂಗೆಯ ಪಂಚಗಂಗಾ ಘಾಟ್ ಎಂಬಲ್ಲಿ ಮೆಟ್ಟಿಲುಗಳನ್ನು ಇಳಿಯುವಾಗ ಒಂದು ದಿನ ದಾರಿಯಲ್ಲಿ ಕಬೀರರು ಅಡ್ಡ ಮಲಗಿದರು. ಅವರ ಶರೀರದ ಮೇಲೆ ಕಾಲಿಟ್ಟ ರಾಮಾನಂದರ ಬಾಯಲ್ಲಿ "ರಾಮ! ರಾಮ!" ಎಂಬ ಉದ್ಗಾರ ಹೊರಟಿತು. ಇದನ್ನೇ ಕಬೀರರು ದೀಕ್ಷಾಮಂತ್ರವೆಂದು ಸ್ವೀಕರಿಸಿದರು.

ಸರ್ವಜ್ಞ ತನ್ನ ಕಾಲದ ಬಗ್ಗೆ ವಿಶೇಷವಾಗಿ ಏನು ಹೇಳದೇ ಇದ್ದರೂ, ಹಿಂದಿನ 'ಸರ್ವಜ್ಞನ ಜೀವನ ಚಿತ್ರಣ' ಅಧ್ಯಯನದಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ. ಸರ್ವಜ್ಞನ ಕಾಲವನ್ನು ೧೫೬೦–೧೬೦೦ ಇರಬಹುದು ಎಂದು ಒಂದು ಒಮ್ಮತದ ಅಭಿಪ್ರಾಯಕ್ಕೆ ಬರಲಾಗಿದೆ. 'ಕಬೀರದಾಸರು ೧೪೪೦–೧೫೧೮  ಭರತ ವರ್ಷದ ಉತ್ತರ ಭಾಗಗಳಲ್ಲಿ ಬಹಳವಾಗಿ ಪ್ರಚಾರಕ್ಕೆ ಬಂದ ಒಂದು ಧರ್ಮ ಪಂಥದ ಸ್ಥಾಪಕ. ಹುಟ್ಟಿದ್ದು ೧೩೯೮ ನೆಯ ಇಸ್ವಿಯ ಅಥವಾ ವಿಕ್ರಮ

ಸಂವತ್ಸರ ೧೪೫೬ ರಲ್ಲಿ ವಾರಣಾಸಿಯಲ್ಲಿ.' ಹೀಗೆ ಸರ್ವಜ್ಞ ಮತ್ತು ಕಬೀರ ಕಾಲದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಸರ್ವಜ್ಞ ಮತ್ತು ಕಬೀರರ ಕಾಲದ ಬಗ್ಗೆ ಅಂಥಾ ದೂರದ ಅಂತರವೇನಿಲ್ಲವೆಂದೇ ಹೇಳಬಹುದು.

ಕಬೀರನ ಹೆಸರಾದ ಕಬೀರ್ ಬಗೆಗೆ ಅಂಥ ವಿಶೇಷವಾದ ಚರ್ಚೆಯೇನೂ ನಡೆದಿಲ್ಲ. ಆದರೆ ಸರ್ವಜ್ಞನ ಹೆಸರಿನ ಬಗೆಗೆ ನಡೆದಿರುವ ಜಿಜ್ಞಾಸೆ ಮಹತ್ವದ್ದಾಗಿದೆ. ತಮ್ಮ ಕಾವ್ಯ,ಕವಿತೆಯ ಕೊನೆಯಲ್ಲಿ ತಮ್ಮ ತಮ್ಮ ಆರಾಧ್ಯ ದೈವ,ಉಪಾಸನಾ ದೈವದ ನಾಮೋಲ್ಲೇಖ ಮಾಡುವ ಪರಂಪರೆ ಕನ್ನಡದಲ್ಲಿದ್ದರೆ, ಹಿಂದಿಯಲ್ಲಿ ಕಾವ್ಯ,ಕವಿತೆಯ ಅಂತ್ಯದಲ್ಲಿ ತಮ್ಮ ಹೆಸರನ್ನೇ ಉಲ್ಲೇಖ ಮಾಡುತ್ತಾರೆ. ಉದಾಹರಣೆಗೆ, 'ಕಹತ್ ಕಬೀರ್ ಸುನ್ ಭಾಯೀ ಸಾಧೋ, ಕಬೀರ್ ಕಹತಾ ಜಾತ್ ಹೈ, ಧನ್ಯಸೂರ್ ಏಕೌ ಪಲ್ ಸತ್‌ಯುಗ್ ಕಾ ಕಲ್ಪ್ ಜಿಯೇ, ರಹಿಮನ್ ಹೀರಾ ಕಭ್ ಕಹ್ಯೆ ಲಾಖ್ ಟಕಾ ಹೈ ಮೋಲ್' ಎಂದು ಹೇಳಿದರೆ, ಕನ್ನಡದಲ್ಲಿ ಕುಮಾರವ್ಯಾಸ 'ವೀರನಾರಾಯಣ' ಎಂದು, ಲಕ್ಷ್ಮೀಶ 'ಲಕ್ಷ್ಮೀರಮಣ' ಎಂದು, ಬಸವೇಶ್ವರ 'ಕೂಡಲಸಂಗಮ' ಎಂದು, ಅಕ್ಕಮಹಾದೇವಿ 'ಚೆನ್ನಮಲ್ಲಿಕಾರ್ಜುನ' ಎಂದು, ರತ್ನಾಕರವರ್ಣೀ 'ರತ್ನಾಕರಾಧೀಶ್ವರ' ಎಂದು ತಮ್ಮ ಅಂಕಿತಗಳನ್ನು ಉಪಯೋಗಿಸಿದ್ದಾರೆ. ಸರ್ವಜ್ಞನ ಪ್ರತಿ ವಚನದ ಕೊನೆಯಲ್ಲಿ 'ಸರ್ವಜ್ಞ' ಎಂಬ ಶಬ್ದವನ್ನು ಉಪಯೋಗಿಸಿದ್ದು ಇದು ಕೃತಿಕಾರನ ಹೆಸರೇ? ಅವನ ಬಿರುದೇ? ಪರಮಾತ್ಮನಿಗೆ ಬಳಸಿರುವ ವಿಶೇಷಣವೇ? ಸರ್ವೇಶ್ವರನಾದ ಪರಮಾತ್ಮನಿಗೆ ಆರೋಪಿಸಿರುವ ಗುಣವೇ? ಎಂಬೆಲ್ಲ ಪ್ರಶ್ನೆಗಳು ಏಳುತ್ತವೆ.

ಸರ್ವಜ್ಞನ ವಚನಗಳಲ್ಲಿ ಪ್ರಯೋಗಗೊಂಡಿರುವ 'ಸರ್ವಜ್ಞ' ಎಂಬ ಶಬ್ದವನ್ನು ಅವನ ಹೆಸರೆಂದು ಭಾವಿಸಿದರೆ ಅದು ಬೇರೆ ಮಾತು. ಆದರೆ ಶಬ್ದಕೋಶಗಳಲ್ಲಿ ಸಿಗುವ ಅರ್ಥಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ ಆತ ತನ್ನ ವಿದ್ವತ್ತನ್ನು, ದೊಡ್ಡಸ್ತಿಕೆಯನ್ನು ಮೆರೆಯಲು ಈ ಶಬ್ದವನ್ನು ಬಳಸಿರಲಾರ. ಏಕೆಂದರೆ ವಿನಯ ಭಾವನೆ ಸರ್ವಜ್ಞನ ಕಠೋರ ವ್ಯಕ್ತಿತ್ವದ ಅವಿನಾಭಾಗವಾಗಿದೆ. ಸ್ವತಃ ಸರ್ವಜ್ಞನೇ ತಾನು ಕಲಿತಿರುವುದನ್ನು ಕೇಳಿ, ನೋಡಿ, ಅನುಭವದಿಂದ ಹೇಳಿದ್ದಾನೆ.

ಸರ್ವಜ್ಞನೆಂಬುವನು ಗರ್ವದಿಂದಾದನೆ
ಸರ್ವರೊಳಗೊಂದೊಂದು ನುಡಿಕಲಿತು
ವಿದ್ಯದ ಪರ್ವತವೇ ಆದ ಸರ್ವಜ್ಞ

ಈ ಮಟ್ಟದ ವಿನಯವನ್ನು ವ್ಯಕ್ತಪಡಿಸುವ ಸರ್ವಜ್ಞನನ್ನು ಅಹಂಕಾರಿಯೆಂದು ಹೇಳಲಾಗದು. ಕವಿ (ಸರ್ವಜ್ಞ) ತನ್ನ ಹೆಸರನ್ನು ಗೋಪ್ಯವಾಗಿಟ್ಟು ಜಗತ್ಪತಿ ಪರಮೇಶ್ವರನನ್ನು ಸರ್ವಜ್ಞನೆಂದು ಪರಿಭಾವಿಸಿ ಆತನ ಹೆಸರಿನಲ್ಲಿ ತನ್ನ ಭಾವನೆಗಳನ್ನು ಅಭಿವ್ಯಕ್ತಿಸಿರಬಹುದು. ಪ್ರಸಿದ್ಧ ವಿದ್ವಾಂಸರಾದ ಡಾ.ಎಲ್.ಬಸವರಾಜು ಅವರು ತಮ್ಮ 'ಪರಮಾರ್ಥ' ಗ್ರಂಥದಲ್ಲಿ ಸರ್ವಜ್ಞ ಅಂಕಿತನಾಮ, 'ಪರಮಾರ್ಥ' ಎಂದು ಸಾಧಾರವಾಗಿ ಪ್ರತಿಪಾದಿಸಿದ್ದಾರೆ. ಜಿ.ಎಂ.ಉಮಾಪತಿ ಶಾಸ್ತ್ರಿಯವರು ಸಂಪಾದಿಸಿರುವ ಸಂಗ್ರಹದಲ್ಲಿ 'ಸರ್ವಜ್ಞ' ಮತ್ತು 'ಪರಮಾರ್ಥ' ಎಂಬ ಶಬ್ದಗಳು ಸರ್ವಜ್ಞನ ಅಂಕಿತನಾಮಗಳಾಗಿ ಬಳಕೆಯಲ್ಲಿವೆ.

ಕಬೀರ ಮತ್ತು ಸರ್ವಜ್ಞರ ಜಾತಿ-ಧರ್ಮ ಯಾವುದು ಎಂಬುದರ ಬಗೆಗೂ ಜಿಜ್ಞಾಸೆಯಿದೆ. ಕಬೀರ ಕೋರಿ ಅಥವಾ ಕೌಲೀ ಎಂದು ಕರೆಯಲಾಗುವ ಹಿಂದೂ ನೇಯ್ಗೆಯವನೆ? ಅಥವಾ ಮುಸಲ್ಮಾನ ನೇಯ್ಗೆಯವನೆ? ಎಂಬುದರ

ಬಗ್ಗೆ ವಾದ–ವಿವಾದಗಳಿವೆ. ಈತನ ವಚನಗಳಲ್ಲಿ ಕೋರಿ ಮತ್ತು ಜುಲಾಹಾ ಎಂಬ ಎರಡೂ ಶಬ್ದಗಳು ಪ್ರಯೋಗಗೊಂಡಿವೆ.

ಹರಿ ಕೋ ನಾಮ್ ಅಭೈ ಪದ್ ದಾತಾ ಕಹೈ ಕಬೀರಾ ಕೋರಿ,ಮೇರೆ ನಾಮ್ ಕೀ ಅಬೈ ಪದ್ ನಗರಿ, ಕಹೈ ಕಬೀರ್ ಜುಲಾಹಾ–ಬಹುತೇಕ ವಿದ್ವಾಂಸರು ಕಬೀರನ ಪಾಲನೆ–ಪೋಷಣೆ ಮುಸ್ಲಿಂ ಪರಿವಾರದಲ್ಲಾಗಿದ್ದರೂ ಆತ ಮೂಲತಃ ಹಿಂದೂವೆಂದೇ ಒಪ್ಪಿದ್ದಾರೆ.

ಹೀಗೆ ಸರ್ವಜ್ಞ ಕರ್ನಾಟಕವನ್ನೆಲ್ಲ ಸುತ್ತಿ ತನ್ನ ಅನುಭಾವದಿಂದ ಓತಪ್ರೋತವಾದ ವಚನಗಳಿಂದ ಜನಮನದ ಕೊಳೆಯನ್ನು ಕಳೆದಂತೆ, ಉತ್ತರ ಭಾರತದಲ್ಲಿ ಕಬೀರ ತನ್ನ ಅನುಭಾವಜನ್ಯವಾದ ವಚನಗಳಿಂದ ಆ ಭಾಗದ ಜನತೆಯ ಮನಸ್ಸಿನ ಮಲೀನತೆಯನ್ನು ತೊಳೆದ. ಇಬ್ಬರೂ ಇಂದಿಗೂ ಈ ರಾಷ್ಟ್ರದ ಜನಮನದಲ್ಲಿ ನೆಲೆ ನಿಂತಿದ್ದಾರೆ. ಅನುಭಾವ ಸಾಹಿತ್ಯಕ್ಕೆ ಅವರಿಬ್ಬರೂ ನೀಡಿದ ಕೊಡುಗೆ ಅಪಾರವೆಂದೇ ಹೇಳಬೇಕು.

ಕಬೀರನು ಹಾಡಿದ ಹಾಡು ಆತ ಭಗವಂತನಲ್ಲಿ ಲೀನವಾದುದನ್ನು ಸಾರುತ್ತದೆ. ತನ್ನ ಆತ್ಮಸಖಿಯನ್ನು ಕುರಿತು ಹೇಳುವ ಈ ಮಾತು ಅದೆನಿತು ಮಧುರವಾಗಿದೆ ನೋಡಿ:

ಉಠೋ ಸಖಿ ಮೋರ ಮಾಂಗ ಸವಾರೋ
ದುಲಹಾ ಮೋಸೆ ರೂಸಲ ಹೋ !'
ಏಳು ಸಖಿ ! ಏಳೆನ್ನ ಬೈತಲೆಯ ತಿದ್ದು !
ಮದುಮಗನೆನ್ನಮೇಲೆ, ಮುನಿಸುಗೊಳ್ಳುತಿಹನು !
ಭಗವಂತನ ಮುನಿಸು ಅದೆಂತಹ ಮಧುರ !

ಕಾಶಿಯಲ್ಲಿ ಸಾಯುವುದರಿಂದ ಜೀವನ್ಮುಕ್ತಿ ಸಿಗುವುದೆಂದು ಹೇಳಿ ಸಾಯುವವರ ಸಂಖ್ಯೆ ಅಧಿಕವಾಗಿದೆ ಎಂದು ಕಬೀರ ಹೇಳಿದ ಹಾಗೆ ಸರ್ವಜ್ಞನೂ ಹೇಳಿದ.

ವಾರಣಾಸಿಗೆ ಹೋಹ ಕಾರಣವದೇನಯ್ಯಾ
ಕಾರಣ ಪುರುಷನೊಳಗಿರಲು ಅಲೆವುದಕೆ
ಕಾರಣವ ಹೇಳು ಸರ್ವಜ್ಞ !

**ಸಮನ್ವಯಕಾರರು :** ಸ್ವಾಮಿ ರಾಮಾನಂದರಿಂದಾಗಿ ಕಬೀರ ಹೊಸ ಜನ್ಮ ಪಡೆದನೆಂದು ಹೇಳಿದೆ. ನಿರ್ಗುಣ ಪಂಥಕ್ಕೆ ಒಂದು ವ್ಯವಸ್ಥಿತ ರೂಪ ಕೊಡುವಲ್ಲಿ ಕಬೀರದಾಸ ಮೊದಲಿಗನೆಂದೇ ಹೇಳಬಹುದು. ಈ ಪಂಥ ವಿಭಿನ್ನ ಧಾರ್ಮಿಕ ಮತಗಳ ಸಮನ್ವಿತ ರೂಪವೆಂದು ಕರೆಯಬಹುದು. ನಾಥಪಂಥಿಗಳಿಂದ ಈ ಪಂಥ ಪ್ರಭಾವಿತವಾಗಿದ್ದರೂ ಅವರ ಹಾಗೆ ಕೇವಲ ಜ್ಞಾನಕ್ಕೇ ಅಂಟಿಕೊಂಡು ಮುಂದುವರಿಯಿತು. ಈ ಸಾಧನೆಯ ಶ್ರೇಯಸ್ಸು ಕೂಡ ಕಬೀರನದೇ. ನಾಥಪಂಥಿಗಳ ಯೋಗಮಾರ್ಗದಲ್ಲಿ ಭಕ್ತಿಗೆ, ಭಾವುಕತೆಗೆ ಎಡೆಯೆ ಇಲ್ಲ. ಅಲ್ಲಿ ಜ್ಞಾನವೇ ಪ್ರಧಾನ.

ಆದರೆ ವೀರಶೈವ ಶರಣರು 'ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಭಕ್ತಿ–ಜ್ಞಾನ–ಕಾಯಕಗಳನ್ನು ಸಂಗಮಗೊಳಿಸಿ ಪರಿಪೂರ್ಣ ಧರ್ಮ ನಿರ್ಮಿಸಿದ ಹಾಗೆ ಕಬೀರ ಮಧ್ಯಕಾಲೀನದಲ್ಲಿ ಉತ್ತರದಲ್ಲಿ ಅಂತ ಧರ್ಮದ ಅಧಿಷ್ಠಾನಕ್ಕಾಗಿ ಹೆಣಗಿದನೆಂದು ಹೇಳಬಹುದು.' 'ಭಾರತೀಯ ಅದ್ವೈತವಾದದಿಂದ ಪ್ರಭಾವಿತನಾದ ಕಬೀರನ ವಚನಗಳಲ್ಲಿ ಅದ್ವೈತವಾದವನ್ನು ಕಾಣುತ್ತೇವೆ. ಕಬೀರ ಮಾಡಿದ ಬಹು ದೊಡ್ಡ ಕಾರ್ಯವೆಂದರೆ ಹಿಂದೂ ಹಾಗೂ ಮುಸಲ್ಮಾನರಲ್ಲಿ ಐಕ್ಯತೆಯನ್ನುಂಟು ಮಾಡಿದುದು. ಈತನ ದ್ವಿಪದಿಗಳಲ್ಲಿ ಅದ್ವೈತವಾದದ ಜ್ಞಾನ, ಸೂಫಿ ಮತದ ಪ್ರೇಮ, ಪ್ರಪತ್ತಿವಾದಿ ವೈಷ್ಣವ ಮತದ ಅಹಿಂಸೆ, ಮುಸಲ್ಮಾನರ ಏಕೇಶ್ವರವಾದ, ನಾಥಪಂಥಿಗಳ ಯೋಗಮಾರ್ಗ ಎಲ್ಲವೂ ನಮಗೆ ನೋಡಲು ಸಿಕ್ಕುತ್ತವೆ. ಅಂತೇ ನಾನು ಕಬೀರನನ್ನು ಸಮನ್ವಯದ ಆಚಾರ್ಯಪುರುಷನೆಂದು ಕರೆಯುತ್ತೇನೆ.' ಈ ಮಹತ್ತರ ಕಾರ್ಯವನ್ನು ಕರ್ನಾಟಕದ ಶಿವಶರಣರು ಮಾಡಿದರು ಹಾಗೂ ಅನಂತರ ಬಂದ ಸರ್ವಜ್ಞ ಕೂಡ ಮಾಡಿದನು. ಅಂತೆಯೇ ಸರ್ವಜ್ಞ–ಕಬೀರ ನಮಗೆ ಸಮೀಪಸ್ಥರಾಗಿ, ಸಂಬಂಧಿಗಳಾಗಿ ಕಾಲ, ಭಾಷೆಗಳನ್ನು ಮೀರಿ ನಿಲ್ಲುತ್ತಾರೆ. ಇವರಿಬ್ಬರೂ ತಥಾಗಥಿತ ಮನುಷ್ಯ ಮನುಷ್ಯರನ್ನು ಬೇರ್ಪಡಿಸುವ ವರ್ಣಾಶ್ರಮದ ಬೇರು ಕಿತ್ತೆಸೆಯುವ ಪ್ರಯತ್ನದಲ್ಲಿ ನಿರತರಾದವರು ಹಾಗೂ ಕೆಲಮಟ್ಟಿನ ಯಶಸ್ಸು ಪಡೆದವರು. ಆದ್ದರಿಂದಲೇ ಇಬ್ಬರೂ ಅಂದಿಗೂ ಕ್ರಾಂತಿಕಾರಿಗಳಾಗಿದ್ದರು, ಎಂದಿಗೂ ಕ್ರಾಂತಿಕಾರಿಗಳಾಗಿ ಉಳಿಯುತ್ತಾರೆ. ಅವರ ವಚನಗಳು ಎಂದೆಂದಿಗೂ ನವನವೋನ್ಮೇಷಶಾಲಿನಿಯಾಗಿವೆ. ಸರ್ವಜ್ಞ ಕಬೀರರ ವಿಚಾರಧಾರೆಗೆ ಜಂಗು ಹತ್ತುವ ಹೆದರಿಕೆಯೇ ಇಲ್ಲ. ಅವು ಸಾವಿಲ್ಲದ, ಕೇಡಿಲ್ಲದ ಬೆಳಕಿನ ಪುಂಜಗಳು.

ಕಬೀರದಾಸರ ಉಪದೇಶ ಸರಣಿ ನೇರ ಮತ್ತು ಪ್ರಭಾವ ಪೂರ್ಣ. ಗುರು ದೊಡ್ಡವನು ಗುರುವಿನ ಗುಲಾಮನಾಗಬೇಕು. ಆದರೆ ಗುರು ಹೇಗಿರಬೇಕು? ಗುರು ಶಿಷ್ಯನ ಮನಸ್ಸಿನ ಸಂಶಯವನ್ನು ತೊಡೆದು ಹಾಕಬೇಕು. ಶಿಷ್ಯನ ಮನಸ್ಸಿನಲ್ಲಿ ಅಹಂಕಾರವಿರದಂತೆ ಮಾಡಬೇಕಾದವನು ಗುರು. ಗುರು ಉಪದೇಶ ಮಾಡಿಯೂ ಸಹ ನಾನು ದೊಡ್ಡವನು ಅಥವಾ ಇದು ನನ್ನದು ಎಂಬ ಭಾವನೆಗಳು ಶಿಷ್ಯನಲ್ಲಿದ್ದರೆ ಅಲ್ಲಿ ಗುರು ಶಿಷ್ಯರ ಸಂಬಂಧವೆಲ್ಲಿ? ಇಂತಹ ಭಾವನೆಗಳು ಜ್ಞಾನವೂ ಒಟ್ಟಿಗೆ ಮನಸ್ಸಿನಲ್ಲಿ ಇರುವ ಹಾಗಿಲ್ಲ. ಒಂದೇ ಒರೆಯಲ್ಲಿ ಎರಡು ಖಡ್ಗಗಳು ಇರಲು ಸಾಧ್ಯವೇ? ಜ್ಞಾನವಿರುವವನು ನಿಜವಾದ ಗುರು. ಗುರುವಿಗೆ ಜ್ಞಾನವಿಲ್ಲದಿದ್ದರೆ ಕುರುಡು ಶಿಷ್ಯನಿಗೇನು ಜ್ಞಾನ ಬಂದೀತು? ಅವನು ಮತ್ತಷ್ಟು ಕುರುಡು. ಇಂತಹ ಗುರು ಶಿಷ್ಯ ಮಂಡಳಿಯೇ ಅಧಿಕ. ಕುರುಡರು ಕುರುಡರನ್ನು ತಳ್ಳಿಕೊಂಡು ಹೋಗಿ ಹಾಳು ಬಾವಿಗೆ ಬಿದ್ದಂತಿರುತ್ತದೆ. ಅವರ ಜೊಡಿ ನಿಜವಾದ ಗುರು ಭಾಗ್ಯವಶಾತ್ ಸಿಕ್ಕರೆ ಅದೃಷ್ಟವೇ ಅದೃಷ್ಟ, ಪ್ರೇಮದ ಒಂದೆರಡು ಮಾತೇ ಸಾಕು ಶಿಷ್ಯನ ಉದ್ಧಾರವಾದಂತೆ ಅಂಥಹ ಗುರುವಿಗೆ ಮೊದಲು ನಮಸ್ಕಾರ. ಪರಸ್ಪ ಇಬ್ಬರ ನಿಲುವು ಒಂದೇ ಆಗಿರುವುದನ್ನು ಕಾಣಬಹುದು.

'ಶಿಷ್ಯನಾದವನು ಒಳ್ಳೆಯದನ್ನು ಆರಿಸಿಕೊಳ್ಳುವ ಶಕ್ತಿ ಪಡೆದಿರಬೇಕು. ಕೇರುವ ಮೊರ ಅಸಾರವಾದ ಹೊಟ್ಟು, ತೌಡು ಮುಂತಾದುವನ್ನು ಹಾರಿಸಿಬಿಡುತ್ತದೆ. ಸಾರವಾದ ಕಾಳನ್ನು ಹಾರಿಸುವುದಿಲ್ಲ, ಅದೇ 'ವಂದರಿ'ಯಲ್ಲಿ ಕಲ್ಲು ಮಣ್ಣು ಮೇಲೆ ಉಳಿದುಬಿಡುತ್ತದೆ. ಸಾರವಾದುದು ಕೆಳಗೆ ಬೀಳುತ್ತದೆ. ಶಿಷ್ಯನಾದವನು ವಂದರಿಯಾಗಬಾರದು ಕೇರುವ ಮೊರವಾಗಬೇಕು.' ಒಮ್ಮೆ ಗುರು ಹೇಳಿದ 'ಕಬೀರ, ಯಾವುದಾದರೂ ಒಂದು ಕೆಟ್ಟ ಪದಾರ್ಥವನ್ನು ತಂದು ಕೊಡು ಎಂದು. ಆಗ ಹೊರಟು ಪರರ ದೋಷಗಳನ್ನು ನೋಡಿ ನಗುನಗುತ್ತಾ ಕಾಲ ಕಳೆಯುತ್ತಿದ್ದೆ, ನನ್ನಲ್ಲಿಯೇ ಅನಂತ

ದೋಷಗಳಿವೆ ಎಂದು ತಿಳಿದಿರಲಿಲ್ಲ. ಗುರುವಿನ ಮಾತಿನಂತೆ ಅತಿ ಕೆಟ್ಟ ವಸ್ತುವನ್ನು ಹುಡುಕಿಕೊಂಡು ಹೊರಟೆ, ಎಲ್ಲೂ ಸಿಕ್ಕಲಿಲ್ಲ. ಒಂದಲ್ಲ ಒಂದು ಗುಣ ಪ್ರತಿ ವಸ್ತುವಿನಲ್ಲಿ ತೋರುತ್ತದೆ. ಆಗ ನನ್ನಲ್ಲಿಯೇ ಏನು ದೋಷಗಳಿವೆ ನೋಡೋಣ ಎಂದು ಹುಡುಕತೊಡಗಿದೆ. ಅದೆಷ್ಟು ದೋಷ ತುಂಬಿದೆ! ಗುರುವಿಗೆ ನಮಸ್ಕರಿಸಿ ಹೇಳಿದೆ ನನಗಿಂತಲೂ ಕೆಟ್ಟವರು ಬೇರೆ ಇಲ್ಲ ಎಂದು. ಆಗ ಗುರು ನಕ್ಕು ಪ್ರೇಮದಿಂದ ಹೇಳಿದ 'ಕಬೀರ ದುಂಬಿಯನ್ನು ನೋಡಿದ್ದೀಯಾ? ಅದು ಎಲ್ಲೂ ಅವಗುಣವನ್ನು ದೋಷವನ್ನು ನೋಡುವುದಿಲ್ಲ. ಎಲ್ಲಿದ್ದರೂ ಮಕರಂಧವನ್ನು ಅಂದರೆ ಗುಣವನ್ನು ಗ್ರಹಿಸಿ ಸಂಗ್ರಹಿಸುತ್ತದೆ. ಅದರಂತೆ ನೀನು ಸಹ ಮಾಯೆಯ ವಿಕಾರವನ್ನು ನೋಡಿ ಮೋಸ ಹೋಗಬೇಡ, ಎಲ್ಲದರಲ್ಲೂ ಪರಮಾತ್ಮನಿದ್ದಾನೆ ಅವನನ್ನು ಕಾಣುವ ದೃಷ್ಟಿಯನ್ನು ಬೆಳೆಸಿಕೋ' "ಕಬೀರ ಹೊರಟು ಕಣ್ತೆರೆದು ನೋಡಿದ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಗಿಡ ಮರ ಬಳ್ಳಿಗಳಿವೆ. ನಾನಾ ಬಗೆಯ ಹೂವುಗಳು ಅಸಂಖ್ಯಾತವಾಗಿ ಅರಳಿವೆ. ಯಾವ ಹೂವನ್ನು ಹಳಿಯಬೇಕಿಲ್ಲ ಕೀಳಬೇಕಿಲ್ಲ. ತನಗೆ ಬೇಕಾದ ಸುವಾಸನೆಯನ್ನು ಪಡೆಯಲು ಏನೂ ಅಡ್ಡಿಯಾಗಲಿಲ್ಲ" ಇದು ಶಿಷ್ಯನ ಸ್ವಭಾವಕ್ಕೆ ಹಿಡಿದ ಕೈಗನ್ನಡಿ.

ಗುರುವಿನ ವಿಸ್ತರದ । ಪರಿಯ ನಾನೇನೆಂಬೆ ।
ಮೆರೆವ ಬ್ರಹ್ಮಾಂಡದೊಳಹೊರಗನವಬೆಳಗಿ
ಪರಿಪೂರ್ಣನಿಪ್ಪ ಸರ್ವಜ್ಞ ॥೩೦॥

ಹರ ತನ್ನೊಳಿರ್ದು ಗುರು । ತೋರದಿರೆ ತೀಳಿವುದೆ ?
ಮರದೊಳಗೆ ಅಗ್ನಿ ಇರುತಿರ್ದು ತನ್ನ ತಾ ।
ನರಿಯದೇಕೆಂದ ಸರ್ವಜ್ಞ ॥೩೧॥

ಜ್ಯೋತಿಯಿಂದಲಿ ನೇತ್ರ । ರಾತ್ರಿಯೊಳು ಕಾಂಬಂತೆ ।
ಸೂತ್ರದಿಂ ಧಾತನರಿವಂತೆ ಶಿವನ ಗುರು ।
ನಾಥನಿಂದರಿಗು ಸರ್ವಜ್ಞ ॥೩೨॥

ಬಂಧುಗಳು ಆದವರು । ಬಂದುಂಡು ಹೋಗುವರು ।
ಬಂಧನವಕಳೆಯಲರಿಯರು, ಗುರುವಿಂದ ।
ಬಂಧುಗಳು ಉಂಟೆ ಸರ್ವಜ್ಞ ॥೪೧॥

ಗುರುವಿಂಗೆ ದೈವಕ್ಕೆ । ಹಿರಿದು ಅಂತರವುಂಟು ।
ಗುರುತೋರ್ವ ದೈವದೆಡೆಯನು, ದೈವ ತಾ
ಗುರುವ ತೋರುವದೆ ? ಸರ್ವಜ್ಞ ॥೪೪॥

ಸರ್ವಜ್ಞ ಗುರುವಿಗೆ ಕೊಟ್ಟ ಮಹತ್ವ ಬಹುಮುಖ್ಯವಾದುದು. 'ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರ' ನಮ್ಮ ಪರಂಪರೆಗೆ ಬದ್ದನಾಗಿ ಗುರುವಿನ ಮಹಿಮೆಯನ್ನು ನಾನೇನು ಹೇಳಲಿ ಬ್ರಹ್ಮಾಂಡದ ಒಳಹೊರಗು ಪರಿಪೂರ್ಣನಾಗಿದ್ದಾನೆ ಗುರು. ತನ್ನಲ್ಲಿ ಅಡಗಿರುವ ಹರನನ್ನು ತೋರುವವನೇ ಗುರು. ಕತ್ತಲೆಯಲಿ ಜ್ಯೋತಿಯನು

ಬೆಳಗುವವನು ಗುರು. ಇಂತಹ ಗುರುವಿನ ಮಹತ್ವವನ್ನು ಎಷ್ಟು ಹೇಳಿದರೂ ಕಡಿಮೆಯೆ. ಬಂಧುಗಳೆಂಬವರು ಬಂದುಂಡು ಹೋಗುವರು ಬಂಧನವ ಕಳೆಯಲರಿವರೇ? ಆ ಬಂಧನ ಕಳೆಯಬೇಕೆಂದರೆ ಗುರುವಿನ ಮಾರ್ಗದರ್ಶನ ಬೇಕೆ ಬೇಕು. ಇನ್ನು ಮುಂದುವರೆದು ಗುರುವಿನ ಮಹಿಮೆಯನ್ನು ಸರ್ವಜ್ಞ ಈ ರೀತಿ ಹೇಳುತ್ತಾನೆ. ಗುರು ಹಾಗೂ ದೈವಕ್ಕೆ ಹಿರಿದಾದ ಅಂತರವಿದೆ. ದೈವವನ್ನು ಗುರು ತೋರಿಸಲು ಅರಿಯನು ಹೊರತು ಗುರುವನ್ನು ದೈವ ತೋರಲಾರದು. ಸದ್ವಿದ್ಯೆಯನ್ನು ಕಲಿಯಬೇಕಾದರೆ ಸದ್ಗುರುವಿನ ಆಶ್ರಯ ಆರಾಧನೆ ಬೇಕು. ಅವನು ಆತ್ಮಶುದ್ಧಿಯನ್ನು ಜೀವನಯಾನವನ್ನು ದೈವದರ್ಶನವನ್ನು ಮಾರ್ಗದರ್ಶನವನ್ನು ಬೊಧಿಸುತ್ತಾನೆ. ಅಂತಹ ಗುರು ದೊರೆಯಲು ದೈವಕೃಪೆಯೂ ಬೇಕು.

ಹೇಳಬಲ್ಲಡೆ ಗುರುವು । ಕೇಳಬಲ್ಲಡೆ ಶಿಷ್ಯ ।
ಹೇಳಲು ಕೆಳಲರಿಯದಾಗುರುಶಿಷ್ಯ ।
ಮೇಲವೆಂತೆಂದ ಸರ್ವಜ್ಞ ॥೮೦॥

'ಭಕ್ತಿಯಿಲ್ಲದ ಶಿಷ್ಯ ಗೊತ್ತುಗೆಟ್ಟ ಉಪದೇಶ' ಇವುಗಳು ಬತ್ತಿದ ಕೆರೆಯ ಬಯಲಲ್ಲಿ ರಾಜಾನ್ನ ಬಿತ್ತಿ ಬೆಳೆದಂತೆ ವ್ಯರ್ಥ ಎಂದು ಹೇಳುತ್ತ, ಗುರು ಶಿಷ್ಯರಿಬ್ಬರೂ ಯೋಗ್ಯರಾಗಿದ್ದರೆ ಮಾತ್ರ ಯೋಗ್ಯ ಲಾಭ ದೊರೆಯುತ್ತದೆ. ಆದರೆ ಉದಾಸೀನದಿಂದ ಗುರು, ಕೇವಲ ಗೌರವದಿಂದ ಶಿಷ್ಯ ಇದ್ದರೆ ಸಾಲದು. ಅವರಲ್ಲಿ ಪರಸ್ಪರ ಪ್ರಶ್ನೆ-ಉತ್ತರ, ಸಂದೇಹ ಸಮಾಧಾನ ಮೂಡಬೇಕು. ಸಮಸ್ಯೆಗಳ ವಿಚಾರಗಳ ಸಂಘರ್ಷವಾಗಬೇಕು. ಶಿಷ್ಯನನ್ನು ಗುರುವೂ, ಗುರುವನ್ನು ಶಿಷ್ಯನೂ ಒರೆದೊರೆದು ಕೊರೆಕೊರೆದು ನೋಡಬೇಕು, ಪರೀಕ್ಷಿಸಬೇಕು. 'ಸದುದ್ದೇಶ ಪೂರ್ಣವಾದ ಈ ಸಂಘರ್ಷದಿಂದ ಅವಿನಾಶಿಯಾದ ಸತ್ಯಜ್ಞಾನ ಹೊರಹೊಮ್ಮುತ್ತದೆ. ಗುರುವೂ ಬೆಳೆಯುತ್ತ ಹೊಗುತ್ತಾನೆ, ಶಿಷ್ಯನು ತಿಳಿಯುತ್ತ ಹೋಗುತ್ತಾನೆ. ಇದನ್ನು ತುಂಬ ಸಮುಚಿತವಾಗಿ ಸಹಜೋಪಮೆಯಿಂದ ಕಣ್ಣಿಗೆ ಕಟ್ಟುವಂತೆ ಹೇಳುತ್ತಾನೆ ಸರ್ವಜ್ಞ.'

ಎತ್ತಾಗಿ ತೊತ್ತಾಗಿ । ಹಿತ್ತಲದ ಗಿಡನಾಗಿ ।
ಮತ್ತೆ ಪಾದದ ಕೆರನಾಗಿ ಗುರುವಿನ ।
ಹತ್ತಲಿರು ಎಂದ ಸರ್ವಜ್ಞ ॥೫೭॥

ಇಲ್ಲಿ ಗುರುವನ್ನು ಎತ್ತಿನಂತೆ ಹೊತ್ತು ಮೆರೆಯಬೇಕೆಂದು, ತೊತ್ತಿನಂತೆ ಸೇವೆ ಮಾಡಬೇಕೆಂದು, ಹಿತ್ತಲದ ಗಿಡದಂತೆ ಬೇಡಿದ್ದನ್ನೆಲ್ಲ ಒದಗಿಸಿಕೊಡಬೇಕೆಂದು, ಪಾದದ ಕೆರದಂತೆ ಅಂಗರಕ್ಷಕರಾಗಿರಬೇಕೆಂದು ಹೇಳಿರುವುದಲ್ಲದೆ ಎತ್ತೆಂಬ ಚೇತನದಿಂದ ಕೆರವೆಂಬ ಅಚೇತನ ವಸ್ತುವಿನವರೆಗೆ ಶಿಷ್ಯನ ಅಹಂಕಾರದ ಮೆಟ್ಟಿಲುಗಳು ಕಡಿಮೆಯಾಗುತ್ತ ಕೊನೆಗೆ ಹೇಗೆ ಪರಿಪೂರ್ಣವಾಗಬೇಕೆಂಬ ವಿಚಾರವನ್ನು ವ್ಯಕ್ತಗೊಳಿಸುತ್ತಾನೆ.

ಸದ್ಗುರುವಿನ ಶಿಷ್ಯನಾಗಿರಬೇಕು ಅಂತಹ ಗುರುವಿನ ಸೇವೆಯಿಂದ ಬದುಕಿನ ಸನ್ಮಾರ್ಗ ಅರಿವಾಗುತ್ತದೆ. ಹೀಗೆ ಸರ್ವಜ್ಞ-ಕಬೀರರಿಬ್ಬರು ಗುರು-ಗುರುವಿನ ಮಹಿಮೆ ಕುರಿತು ನೀಡುವ ಉಪದೇಶ ಒಂದೇ ಬಗೆಯದಾಗಿ ಕಂಡುಬರುತ್ತದೆ. ಭಾಷೆಯು ಸರ್ವಜ್ಞ ಹಾಗೂ ಕಬೀರರು ಸಾಮಾನ್ಯ ಜನರಾಡುವ ಭಾಷೆಯನ್ನೇ ಆರಿಸಿಕೊಂಡು ತಮ್ಮ ಅನುಭವದ ಮೂಸೆಯಲ್ಲಿ ಅವುಗಳಿಗೆ ಸಂಸ್ಕಾರ ನೀಡಿ, ತಮ್ಮ ಅನುಭವದ ಅಭಿವ್ಯಕ್ತಿಗೆ ತಕ್ಕ ವಾಹಕ ಮಾಡಿಕೊಂಡರು.

ಪಂಡಿತರು ಮತ್ತು ಜನಸಾಮಾನ್ಯರಿಬ್ಬರೂ ಇವರ ರಚನೆಗಳನ್ನು ಓದಿ ಅರ್ಥೈಸಿಕೊಳ್ಳಬಲ್ಲರು. ಆ ವಿಚಾರಧಾರೆಯ ಎದುರಿನಲ್ಲಿ ಮೂಕವಿಸ್ಮಿತರಾಗಬಲ್ಲರು. ಅವರ ಭಾಷೆಗೆ ಗೀತಾತ್ಮಕತೆ ಬಂದುದು ಜಾನಪದದ ಪ್ರಭಾವದಿಂದಾಗಿಯೇ. ಹೀಗಾಗಿ ಧರ್ಮದಲ್ಲಿ ಅಷ್ಟೇ ಸಮನ್ವಯ ಸಾಧಿಸಿದರು.

ಕಬೀರದಾಸನ ವಾಣಿಯ ಬಳ್ಳಿ, ಯೋಗದ ಕ್ಷೇತ್ರದಲ್ಲಿ ಭಕ್ತಿಯ ಬೀಜದಿಂದಾಗಿ ಅಂಕುರಿಸಿದುದು. ಆ ದಿನಗಳಲ್ಲಿ ಉತ್ತರದ ಹಠಯೋಗಿಗಳಲ್ಲಿ ಮತ್ತು ದಕ್ಷಿಣದ ಭಕ್ತರಲ್ಲಿ ಮೂಲತಃ ಬಹು ದೊಡ್ಡ ಅಂತರವಿತ್ತು. ಒಂದು ಮುರಿಯಲು ಸಿದ್ಧ ಆದರೆ ಬಾಗುತ್ತಿರಲಿಲ್ಲ. ಇನ್ನೊಂದು ಬಾಗುತ್ತಿತ್ತು ಆದರೆ ಮುರಿಯುತ್ತಿರಲಿಲ್ಲ. ಒಂದಕ್ಕೆ ಸಾಮಾಜಿಕವಾಗಿ ನಿರ್ಮಾಣಗೊಂಡಿರುವ ಮೇಲು–ಕೀಳುಗಳೆಂಬ ಭಾವನೆಯಲ್ಲಿ ವಿಶ್ವಾಸವಿಲ್ಲ. ಅಷ್ಟೇ ಅಲ್ಲ ಅವುಗಳನ್ನು ನಷ್ಟಗೊಳಿಸುವ ಕ್ರಾಂತಿಕಾರಿ ಪ್ರವೃತ್ತಿ. ಇನ್ನೊಂದಕ್ಕೆ ವಿಶ್ವಾಸವಿರದಿದ್ದುದನ್ನು ಅದನ್ನೆಲ್ಲ ಮೆಟ್ಟಿ ನಿಲ್ಲದ ಒಂದು ರೀತಿಯ ಅಸಹಾಯಕತೆ ಕಂಡು ಬರುತ್ತದೆ.

ಆದರೆ ಹನ್ನೆರಡನೆಯ ಶತಮಾನದ ಮಹಾ ಸಾಮಾಜಿಕ ಸಮಗ್ರ ಕ್ರಾಂತಿಯ ನಂತರ ಕರ್ನಾಟಕದಲ್ಲಿ ವರ್ಣಾಶ್ರಮ, ಧರ್ಮವು ಗಡಗಡ ನಡುಗಿತು. ಈ ಉತ್ಕ್ರಾಂತಿಯ ನಂತರ ಹುಟ್ಟಿ ಬಂದ ಸರ್ವಜ್ಞ ಈ ಅಗ್ನಿಯ ಮಧ್ಯದಿಂದ ಎದ್ದು ಬಂದ 'ಅಗ್ನಿಶಿಖೆ' ಯಾಗಿ ಪರಿಣಮಿಸುತ್ತಾನೆ. ಕಬೀರನ ಹಾಗೆ ಜನತೆಯ ಮಧ್ಯ ಇದ್ದು ಅವರನ್ನು ತಿದ್ದುವ ಹಾಗೂ ಶಿವಪಥಕ್ಕೆ ಯೋಗ್ಯರನ್ನಾಗಿ ಮಾಡುವ ಕಾಯಕ ಕೈಗೊಂಡು ಸರ್ವಜ್ಞ ಅದರಲ್ಲಿ ಬಹುಮಟ್ಟಿಗೆ ಯಶಸ್ಸನ್ನೂ ಸಾಧಿಸಿ ತೋರಿಸಿದ್ದಾನೆ. ಭಾರತದ ಅನುಭಾವ ಸಾಹಿತ್ಯದಲ್ಲಿ ಸರ್ವಜ್ಞ ಮತ್ತು ಕಬೀರರು ಮೇಲಿನ ಈ ಎಲ್ಲ ಕಾರಣಗಳಿಂದ ಚಿರಸ್ಥಾಯಿಯಾಗಿದ್ದಾರೆ.

## ಆಧಾರ ಗ್ರಂಥಗಳು


೧. ಮಹಾಯೋಗಿ ವೇಮನ: ಎಸ್.ಆರ್.ಪಾಟೀಲ. ವೇಮನ ಗ್ರಂಥಮಾಲಾ ಹುಲಕೋಟಿ– ೧೯೯೩.

೨. ಸಾಹಿತ್ಯ ಭಾರತಿ: ಅನಂತರಂಗಾಚಾರ್.ಎನ್. ಮೈಸೂರ ವಿಶ್ವವಿದ್ಯಾಲಯ–೧೯೨೪

೩. ವೇಮನನ ಸಾಮಾಜಿಕ ಚಿಂತನೆ–ಒಂದು ಇಣುಕುನೋಟ: ಶ್ರೀ.ಎಂ.ದೇವರಕೊಂಡಪ್ಪ. ಪು.೩. ಮಹಾಯೋಗಿ ವೇಮನ ಪೀಠ ಕ.ವಿ.ವಿ.ದಾರವಾಡ –೨೦೦೫

೪. ಸಾಹಿತ್ಯ ಚಿಂತನ: ಚನ್ನವೀರ ಕಣವಿ–೧೯೬೬

೫. ಸಟೀಕಾ ಸರ್ವಜ್ಞನ ವಚನಗಳು: ೧ನೆಯ ಭಾಗ, ಸಂ.ಉತ್ತಂಗಿ ಚನ್ನಪ್ಪ–೧೯೫೫

೬. ಸರ್ವಜ್ಞನ ಸಾಹಿತ್ಯ ಕುರಿತು ಅಧ್ಯಯನಗಳು: ಸಂ.ವೀರೇಶ.ಬಡಿಗೇರ. ಕ.ವಿ.ವಿ.ಹಂಪಿ–೨೦೧೪

೭. ಸರ್ವಜ್ಞನ ತೌಲನಿಕ ಅಧ್ಯಯನಗಳು: ಸಂ.ಡಾ.ಪಿ.ಮಹದೇವಯ್ಯ  ಕ.ವಿ.ವಿ.ಹಂಪಿ–೨೦೧೪

೮. ಸರ್ವಜ್ಞ ಕವಿ: ಎ.ಆರ್.ಕೃಷ್ಣಶಾಸ್ತ್ರಿಗಳು.

೯. ಬಸವಣ್ಣನವರು: ಡಾ.ಎಂ.ಚಿದಾನಂದಮೂರ್ತಿ. ಸಪ್ನ ಬುಕ್ ಹೌಸ್ ಬೆಂಗಳೂರು.

೧೦. ಕನ್ನಡ ಸಾಹಿತ್ಯ ಸಂಗಾತಿ: ಕೀರ್ತಿನಾಥ ಕುರ್ತಕೋಟಿ. ಕುರ್ತಕೋಟಿ ಮೆಮೋರಿಲ್ ಟ್ರಸ್ಟ ಧಾರವಾಡ ೨೦೧೬

೧೧. ಅಬ್ಬಲೂರು ಚರಿತೆ.

೧೨.ಕಬೀರ ಕಣಜ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು. ಎಂ.ವಿ.ಐ, ಎಚ್.ಆರ್.ಆರ್.ಐ